ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಜೈಪುರದಲ್ಲಿ ಶನಿವಾರ ಸನ್ ರೈಸರ್ಸ್ ಹೈದರಾಬಾದ್ ತಂಡದ ವಿರುದ್ಧ 36 ಎಸೆತದಲ್ಲಿ ಶತಕ ಗಳಿಸಿದ ರಾಜಸ್ಥಾನ ರಾಯಲ್ಸ್ ತಂಡದ ವೈಭವ್ ಸೂರ್ಯವಂಶಿ... ಹೈದರಾಬಾದ್ ಗೆಲುವಿಗೆ 229ರನ್...

26 ಏಪ್ರಿಲ್ 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 47 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ವ್ಯರ್ಥನಂದನದಲ್ಲಿ ಕ್ರೂರ ಏಪ್ರಿಲ್ ಮಾಸ » 2

ಹೈಸ್ಪೀಡ್ ರೈಲು : ಆದಿತ್ಯ ಸಂಕೀರ್ಣ ಉದ್ಘಾಟನೆ » 3



ದಾಖಲೆ ಬರೆದ ಪಂಜಾಬ್ ಕಿಂಗ್ಸ್ » 4

ಸಿ.ಎಂ. ಹುದ್ದೆಗಾಗಿ ಸಹೋದರರ ಬಿಗಿಪಟ್ಟು

ಮಲ್ಲಿಕಾರ್ಜುನ ಖರ್ಗೆ ಭೇಟಿಯಾದ ಡಿ.ಕೆ.ಶಿ.-ಸುರೇಶ್ | ಸ್ಪಷ್ಟನೆ ಬಹಿರಂಗಪಡಿಸಲು ಒತ್ತಡ

• ಪ್ರಜೋದಯ ವರದಿ

ಬೆಂಗಳೂರು: ಸರ್ಕಾರದ ನಾಯಕತ್ವ ವಿಚಾರದಲ್ಲಿ ತಮ್ಮ ಸರದಿ ಯಾವಾಗ ಎಂದು ಕಾಯುತ್ತಿರುವ ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ಹಾಗು ಡಿ.ಕೆ.ಸುರೇಶ್ ಅವರು ದೆಹಲಿಯಲ್ಲಿ ಠಿಕಾಣಿ ಹೂಡಿದ್ದು ಎಐಸಿಸಿ ಅಧ್ಯಕ್ಷರ ಭೇಟಿಯಾಗಿ ಸುದೀರ್ಘ ಮಾತುಕತೆ ನಡೆಸಿದ್ದಾರೆ.

ರಾಜ್ಯ ಸರ್ಕಾರಕ್ಕೆ ಮೂರು ವರ್ಷ ಪೂರ್ಣಗೊಳ್ಳುತ್ತಿರುವ ಹಿನ್ನಲೆಯಲ್ಲಿ ಮುಖ್ಯ ಮಂತ್ರಿ ಬದಲಾವಣೆ ಚರ್ಚೆ ಗರಿಗೆದರಿದೆ. ದಲಿತರ ಒಳಮೀಸಲು ಸಂಬಂ ಧದ ವಿಶೇಷ ಸಂಪುಟ ಸಭೆಗೂ ಗೈರಾದ ಶಿವಕುಮಾರ್ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿದ್ದಾರೆ. ಮತ್ತೊಂದೆಡೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಆಪ್ತ ಸಚಿವರ ಸಭೆ ನಡೆಸಿ ತಮ್ಮದೇ ಯಾದ ತಂತ್ರ ಹೆಣೆಯುತ್ತಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಶಿವ ಕುಮಾರ್ 40 ನಿಮಿಷಗಳಿಗೂ ಹೆಚ್ಚು ಕಾಲ ಮಾತುಕತೆ ನಡೆಸಿದ್ದಾರೆ. ಪಂಚ ರಾಜ್ಯಗಳ ಚುನಾವಣಾ ಫಲಿತಾಂಶ ಮೇ 4ರಂದು ಪ್ರಕಟವಾಗಲಿದ್ದು ಅಲ್ಲಿವರೆಗೆ ಶಿವಕುಮಾರ್

ಅವರಿಗೆ ಯಾವುದೇ ಸಂದೇಶವನ್ನು ಹೈಕಮಾಂಡ್ ನೀಡಿಲ್ಲ ಎನ್ನಲಾಗಿದೆ. ಐದು ರಾಜ್ಯ ಗಳ ಫಲಿತಾಂಶ ಪ್ರಕಟಕ್ಕೆ ಮುನ್ನವೇ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ತೀರ್ಮಾನ ತೆಗೆದುಕೊಳ್ಳ ಬೇಕೆಂದು ಹೈಕಮಾಂಡ್ ನಾಯಕರ ಮೇಲೆ ಒತ್ತಡ ಹೇರಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕರೆಸಿ ಮನವೊಲಿಸ ಬೇಕೆಂದು ಖರ್ಗೆ ಅವರಲ್ಲಿ ಮತ್ತೊಮ್ಮೆ ಪ್ರಸ್ತಾಪಿಸಿದ್ದಾರೆಂದು ಮೂಲಗಳು ತಿಳಿಸಿವೆ.

ಎರಡೂವರೆ ವರ್ಷದ ಬಳಿಕ ಅಧಿಕಾರ ಹಸ್ತಾಂತರ ಆಗಲಿದೆ ಎಂದು ಹೈಕಮಾಂಡ್ ನನಗೆ ಭರವಸೆ ನೀಡಿತ್ತು. ಉಭಯ ನಾಯಕರನ್ನು ಕರೆಸಿ ಬಿಕ್ಕಟ್ಟು ಬಗೆಹರಿಸುವುದಾಗಿ ಹೈಕಮಾಂಡ್ ಆರು ತಿಂಗಳ ಹಿಂದೆ ಭರವಸೆ ನೀಡಿತ್ತು. ದೆಹಲಿಯಲ್ಲಿ ಮಾತುಕತೆಗೆ ಮೂರು ಸಲ ದಿನಾಂಕ ನಿಗದಿ ಮಾಡಲಾಗಿತ್ತು. ವಿಶೇಷ ಅಧಿವೇಶನ ಮತ್ತಿತರ ನೆಪ ಹೇಳಿ ಮುಖ್ಯ ಮಂತ್ರಿಯವರು ದೆಹಲಿಗೆ ಬರಲಿಲ್ಲ. ಅದಾದ ಬಳಿಕ, ಪಂಚ ರಾಜ್ಯಗಳ ಚುನಾವಣಾ ವೇಳಾಪಟ್ಟಿ ಪ್ರಕಟವಾಯಿತು. ಹೈಕಮಾಂಡ್ ನಿರ್ದೇಶನದ ಪ್ರಕಾರ ಅಸ್ಸಾಂ, ಕೇರಳ ಹಾಗು ತಮಿಳುನಾಡಿನಲ್ಲಿ ಪಕ್ಷದ ಪರವಾಗಿ ಕೆಲಸ ಮಾಡಿದ್ದೇನೆ. ಇದೀಗ ಚುನಾವಣೆ ಮುಗಿದಿದೆ. ಅಧಿಕಾರ ಹಸ್ತಾಂತರದ ಬಗ್ಗೆ ಹೈಕಮಾಂಡ್ ಕೂಡಲೇ ತೀರ್ಮಾನ ತೆಗೆದುಕೊಳ್ಳಬೇಕೆಂದು ಶಿವ ಕುಮಾರ್ ಆಗ್ರಹಿಸಿದ್ದಾರೆ ಎನ್ನಲಾಗಿದೆ.

ಮೇ 20ರ ಒಳಗೆ ಸಂಪುಟ ವಿಸ್ತರಣೆ

ಎಲ್ಲಾ ಹಿರಿಯ ಶಾಸಕರು ದೆಹಲಿಯಲ್ಲಿ ಹೈಕಮಾಂಡ್ ಭೇಟಿ ಮಾಡಿದ್ದಾರೆ. ಮೇ 20 ರೊಳಗೆ ಸಚಿವ ಸಂಪುಟ ವಿಸ್ತರಣೆಯಾಗುವ ವಿಶ್ವಾಸವಿದೆ ಎಂದು ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್ ಅವರು ಹೇಳಿದ್ದಾರೆ.

ಈ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಹೈಕಮಾಂಡ್ ತೀರ್ಮಾನವೇ ಅಂತಿಮ. ಸಿದ್ದರಾಮಯ್ಯ ಅವರು ತಮ್ಮ ಮಂತ್ರಿ ಮಂಡಲದ ಸಭೆ ಮತ್ತು ಶಾಸಕರ ಸಭೆ ನಡೆಸುತ್ತಾರೆ. ಅದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲವೆಂದರು.

ಸದ್ಯ ನಾಯಕತ್ವ ಬದಲಾವಣೆ ಮಾತೇ ಇಲ್ಲ. ಈ ಕುರಿತು ಮಾತನಾಡದಂತೆ ಹೈಕ ಮಾಂಡ್ ಸೂಚನೆ ನೀಡಿದೆ. ಹೀಗಾಗಿ ಈ ಬಗ್ಗೆ ಯಾವುದೇ ಹೇಳಿಕೆ ನೀಡುವುದಿಲ್ಲ. ಈಗಿರುವ ಶೇ.50 ಸಚಿವರನ್ನು ಪಕ್ಷದ ಕೆಲಸಕ್ಕೆ ನಿಯೋಜನೆ ಮಾಡಬೇಕು. ಉಳಿದವರಿಗೆ ಅವಕಾಶ ನೀಡ ಬೇಕೆಂದು ಮನವಿ ಮಾಡಿದ್ದೇವೆ. ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದವರ ವಿರುದ್ಧ ಕ್ರಮಕ್ಕೆ ಸಚಿವ ಜಮೀರ್ ಅಹಮದ್ ಖಾನ್ ಒತ್ತಾಯಿಸಿದ್ದಾರೆ. ಇದು ನಾನು ಸೇರಿ ಪ್ರತಿ ಯೊಬ್ಬ ಕಾರ್ಯಕರ್ತನ ಒತ್ತಾಯವಾಗಿದೆ ಎಂದರು.

ಯಾರು ಸಿ.ಎಂ. ಆಗ್ತಾರೋ ಗೊತ್ತಿಲ್ಲ

ರಾಜ್ಯದ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ. ಖಾಲಿಯಾದಾಗ ಯಾರು ಬಂದು ಕುಳಿತು ಕೊಳ್ಳುತ್ತಾರೋ ನೋಡೋಣ ಎಂದು ಪಶುಸಂಗೋಪನೆ ಇಲಾಖೆ ಸಚಿವ ಕೆ.ವೆಂಕಟೇಶ್ ಅವರು ಪ್ರತಿಕ್ರಿಯಿಸಿದರು.

ಬೆಳಗಾವಿಯಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧಿಕಾರ ಹಂಚಿಕೆ ವಿಚಾರ ವಾಗಿ ಏನು ಮಾತುಕತೆ ಆಗಿದೆ ನಮಗೆ ಗೊತ್ತಿಲ್ಲ. ಮುಖ್ಯಮಂತ್ರಿ ಆಗಬೇಕೆಂದು ಬಯಸುವುದೂ ತಪ್ಪಲ್ಲವೆಂದರು.

ಸಚಿವ ಸಂಪುಟ ವಿಸ್ತರಣೆ ವೇಳೆ ಈಗಿರುವ ಅರ್ಧದಷ್ಟು ಸಚಿವರನ್ನು ಕೈಬಿಟ್ಟ ಹೊಸಬರಿಗೆ ಸ್ಥಾನ ನೀಡಬೇಕೆಂಬುದು ಕೆಲವರ ಅಭಿಪ್ರಾಯ. ನಾನು ನನ್ನ ಅಭಿಪ್ರಾಯ ಹೇಳುತ್ತೇನೆ.

ಅಂತಿಮವಾಗಿ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಕಾಂಗ್ರೆಸ್ ಪಕ್ಷ ಅಲ್ಪಸಂಖ್ಯಾತರ ಕಡೆಗಣನೆ ಮಾಡಿಲ್ಲ, ಶಿಸ್ತು ಉಲ್ಲಂಘಿಸಿದ್ದರಿಂದ ಕೆಲವರ ಮೇಲೆ ಕ್ರಮ ಕೈಗೊಂಡಿದ್ದಾರೆಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕುಡಿಯುವ ನೀರಿಗಾಗಿ 45 ಕೋಟಿ ರೂ. ಅನುದಾನ

• ಪ್ರಜೋದಯ ವರದಿ

ಬೆಂಗಳೂರು: ರಾಜ್ಯದ ಗ್ರಾಮೀಣ ಭಾಗಗಳಲ್ಲಿ ಕುಡಿಯುವ ನೀರು ಪೂರೈಕೆಯ ತುರ್ತು ಕಾಮಗಾರಿಗಳಿಗೆ ಗ್ರಾಮೀಣ ಕುಡಿಯುವ ನೀರು ಮತ್ತು ಸ್ವಚ್ಛತಾ ಇಲಾಖೆಯು 45 ಕೋಟಿ ರೂ. ಅನುದಾನ ಹಂಚಿಕೆ ಮಾಡಿದೆ.

ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿನ ಅಭಾವ ಎದುರಾದರೆ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲು, ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಪಡೆಯಲು ಹಾಗು ಇತರೆ ತುರ್ತು ಕ್ರಮಗಳಿಗೆ ಈ ಅನುದಾನವನ್ನು ಅಗತ್ಯಕ್ಕೆ ಅನುಸಾರವಾಗಿ ವಿವಿಧ ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿದೆ ಎಂದು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ತಿಳಿಸಿದ್ದಾರೆ.

ಬೆಳಗಾವಿ, ಕಲಬುರಗಿ, ಕೋಲಾರ, ರಾಯಚೂರು, ರಾಮನಗರ ಮತ್ತು ಉಡುಪಿ ಜಿಲ್ಲೆಗೆ ತಲಾ 2 ಕೋಟಿ ರೂ., ಬಾಗಲಕೋಟೆ, ಬೆಂಗಳೂರು, ಬೆಂಗಳೂರು (ಗ್ರಾ), ಬೆಂಗಳೂರು (ನಗರ), ಬೀದರ್, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ಹಾಸನ, ಹಾವೇರಿ, ಕೊಪ್ಪಳ, ಮೈಸೂರು, ಶಿವಮೊಗ್ಗಾ, ವಿಜಯನಗರ, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಗೆ ತಲಾ 1.50 ಕೋಟಿ ರೂ., ದಕ್ಷಿಣ ಕನ್ನಡ, ದಾವಣಗೆರೆ, ಧಾರವಾಡ, ಗದಗ, ಕೊಡಗು, ಮಂಡ್ಯ, ತುಮಕೂರು ಮತ್ತು ಉತ್ತರ ಕನ್ನಡ ಜಿಲ್ಲೆಗೆ ತಲಾ 1 ಕೋಟಿ ರೂ.ನಂತೆ ಹಣ ಬಿಡುಗಡೆ ಮಾಡಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು ಸರಬರಾಜು ಮಾಡಲು ಆದ್ಯತೆ ನೀಡಬೇಕು, ಸ್ಥಗಿತಗೊಂಡಿರುವ ಕೊಳವೆ ಬಾವಿ ಗಳನ್ನು ಮತ್ತಷ್ಟು ಆಳಕ್ಕೆ ಕೊರೆಯಲು ಪ್ರಯತ್ನಿಸಬೇಕು, ಅನಿವಾರ್ಯ ವಾದರೆ ಭೂ ವಿಜ್ಞಾನಿಗಳ ಸಲಹೆ ಪಡೆದು ಹೊಸ ಕೊಳವೆ ಬಾವಿ ಕೊರೆಯಲು ಕ್ರಮ ಕೈಗೊಳ್ಳ ಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಯೆಂದು ಮಾಹಿತಿ ನೀಡಿದ್ದಾರೆ.

ತುರ್ತು ಕಾಮಗಾರಿಗಳಿಗೆ ಕಾರ್ಯಪಡೆ ಸಮಿತಿಯಲ್ಲಿ ಅನುಮೋದನೆ ಪಡೆಯಲು ಸಿಇಒಗಳಿಗೆ ತಿಳಿಸಲಾಗಿದೆ. ಯೋಜನೆಗಳ ಅನುಷ್ಠಾನದಲ್ಲಿ ಗುಣಮಟ್ಟ ಮತ್ತು ಪಾರದರ್ಶಕತೆ ಪಾಲಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಕಾರ್ಯಗಳ ಪ್ರಗತಿಯನ್ನು ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಹಾಗು ಸಂಬಂಧಿಸಿದ ಇಂಜಿನೀಯರ್‌ಗಳು ನಿಯಮಿತವಾಗಿ ಪರಿಶೀಲಿಸುವ ಜವಾಬ್ದಾರಿ ವಹಿಸಿಕೊಳ್ಳಬೇಕೆಂದು ಸಚಿವರು ನಿರ್ದೇಶನ ನೀಡಿದ್ದಾರೆ.

ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ ಶಾಸಕ ಕುಲಕರ್ಣಿ

ಬೆಂಗಳೂರು: ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯ ಯೋಗೀಶಗೌಡ ಗೌಡರ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಸೆಷನ್ಸ್ ನ್ಯಾಯಾಲಯದ ತೀರ್ಪು ಪ್ರಶ್ನಿಸಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ.

ಜಾಮೀನು ಹಾಗು ಶಿಕ್ಷೆಗೆ ತಡೆ ಕೋರಿ ಸಲ್ಲಿಸಲಾಗಿರುವ ಈ ಅರ್ಜಿಗಳು ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇಕಿದೆ. ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್ ಅವರು ವಿನಯ ಕುಲಕರ್ಣಿ ಪರ ವಕಾಲತ್ತು ವಹಿಸಿದ್ದಾರೆ. ಪ್ರಕರಣದಲ್ಲಿ 17 ಆರೋಪಿಗಳನ್ನು ಅಪರಾಧಿಗಳು ಎಂದು ತೀರ್ಮಾನಿಸಿರುವ ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ 16 ಜನರಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ. ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಈ ಶಿಕ್ಷೆ ವಿಧಿಸಿ ಆದೇಶಿಸಿದ್ದರು.

ಜಿಲ್ಲೆಯಲ್ಲಿ 10 ಸಾವಿರ ಕುಟುಂಬಕ್ಕೆ ಇನಾಂ ಭೂಮಿಹಕ್ಕು

ಒಟ್ಟು 24,828 ಅರ್ಜಿ ಸಲ್ಲಿಕೆ | 14,714 ತಿರಸ್ಕೃತ | ಕೇವಲ 7 ಅರ್ಜಿ ಬಾಕಿ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

ಹಾಸನ: ಇನಾಂ ಭೂಮಿಯ ಮರು ಮಂಜೂರಾತಿ (ರೀ-ಗ್ರಾಂಟ್) ವಿಚಾರದಲ್ಲಿ ರಾಜ್ಯದಲ್ಲೇ ಮಾದರಿ ಸಾಧನೆ ತೋರಿರುವ ಹಾಸನ ಜಿಲ್ಲೆ ಸಲ್ಲಿಕೆಯಾಗಿದ್ದ ಅರ್ಜಿಗಳಲ್ಲಿ ಶೇ.99 ರಷ್ಟು ವಿಲೇವಾರಿ ಪೂರ್ಣಗೊಳಿಸಿದೆ. ಅರ್ಹತೆಯ ವಿಚಾರದಲ್ಲಿ ಗೊಂದಲ ಮತ್ತು ದಾಖಲೆ ಕೊರತೆಯ ಕಾರಣ ನೀಡಿ 14,714 ಅರ್ಜಿಗಳನ್ನು ತಿರಸ್ಕರಿಸಿರುವುದು ಹಲವು ಅರ್ಜಿದಾರರ ಅಸಮಾಧಾನಕ್ಕೆ ಕಾರಣವಾಗಿದೆ.

ಪೂರ್ವಜರು ಪಡೆದಿದ್ದ ಇನಾಂ ಭೂಮಿಗೆ ಸೂಕ್ತ ದಾಖಲಾತಿಗಳನ್ನು ಒದಗಿಸಿ, ಮರು ಮಂಜೂರಾತಿಗೆ ಜಿಲ್ಲೆಯಲ್ಲಿ ಒಟ್ಟು 24,828 ಅರ್ಜಿಗಳು ಸಲ್ಲಿಕೆಯಾಗಿದ್ದವು. ಅಷ್ಟು ಅರ್ಜಿ ಗಳನ್ನು ಕಂದಾಯ ಮತ್ತು ಮುಜರಾಯಿ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿ ಯಾವುದೇ ಆಕ್ಷೇಪಣೆ ಸಲ್ಲಿಕೆಯಾಗದ ಅರ್ಹ 10,114 ಅರ್ಜಿಗಳನ್ನು ಪುರಸ್ಕರಿಸಿ ಭೂಮಿ ಮಂಜೂರಾತಿ ನೀಡಿದ್ದಾರೆ. ಸಲ್ಲಿಕೆಯಾದ ಒಟ್ಟು ಅರ್ಜಿಗಳಲ್ಲಿ ಕೇವಲ 7 ಅರ್ಜಿಗಳನ್ನು ಮಾತ್ರ ಬಾಕಿ ಉಳಿಸಿಕೊಂಡಿದೆ. ಅದರೊಂದಿಗೆ 10 ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಇನಾಂ ಭೂಮಿ ಹಕ್ಕು ದೊರೆತಿದೆ. ಅರ್ಹತೆ ಹೊಂದಿದ್ದರೂ ತಮ್ಮ ಅರ್ಜಿಗಳು ತಿರಸ್ಕೃತಗೊಂಡಿವೆ ಎಂಬ ಆಕ್ರೋಶ ಅನೇಕ ಅರ್ಜಿದಾರರಲ್ಲಿ ವ್ಯಕ್ತವಾಗಿದೆ.

ಏನೀದು ಇನಾಂ ಭೂಮಿ

ಈ ಹಿಂದೆ ಆಳ್ವಿಕೆ ನಡೆಸಿದ ರಾಜ ಮಹಾರಾಜರು ಹಾಗು ಬ್ರಿಟೀಷ್ ಆಡಳಿತ ಕಾಲದಲ್ಲಿ ದೇವಸ್ಥಾನ, ಮಸೀದಿ ಸೇರಿ ಧಾರ್ಮಿಕ ಸಂಸ್ಥೆಗಳ ನಿರ್ವಹಣೆಗಾಗಿ ಗ್ರಾಮ ಸೇವಕರಿಗೆ ಹಾಗು ವಿಶೇಷ ಸಾಧನೆ ಮಾಡಿದವರಿಗೆ ಗೌರವ ಸೂಚಕವಾಗಿ ತೆರಿಗೆ ರಹಿತ ಅಥವಾ ರಿಯಾಯಿತಿ ದರದಲ್ಲಿ ಭೂಮಿಯನ್ನು ನೀಡಲಾಗುತ್ತಿತ್ತು. ಅವುಗಳನ್ನು ಧಾರ್ಮಿಕ ಇನಾಂ, ಸೇವೆ ಇನಾಂ ಮತ್ತು ವೈಯಕ್ತಿಕ ಇನಾಂ ಎಂಬ ವಿಭಾಗಗಳಲ್ಲಿ ವರ್ಗೀಕರಿಸಿ ನೀಡಲಾಗಿತ್ತು.

ಆದರೆ, ಇಂತಹ ಭೂಮಿಗಳಲ್ಲಿ ಬಹುತೇಕವು ಸರಿಯಾದ ದಾಖಲೆಗಳ ಕೊರತೆಯಿಂದ ಇಂದಿಗೂ ವಿವಾದಗಳಲ್ಲಿ ಸಿಲುಕಿವೆ. ಶತಮಾನಗಳಿಂದಲೂ ಉಳುಮೆ ಮಾಡುತ್ತಿರುವ ಕುಟುಂಬಗಳಿಗೆ ಭೂಸ್ವಾಮ್ಯದ ಹಕ್ಕು ದೊರೆಯದೇ ಸಂಕಷ್ಟ ಮುಂದುವರಿದಿದೆ. ಇನಾಂ ಭೂಮಿಗಳ

» ನಾಲ್ಕನೇ ಪುಟದಲ್ಲಿ

ತಿರಸ್ಕೃತ ಅರ್ಜಿಗಳ ಪ್ರಮಾಣ ಹೆಚ್ಚು

ವಿಲೇವಾರಿ ಪ್ರಮಾಣದಲ್ಲಿ ರಾಜ್ಯದಲ್ಲಿ ಮುಂದಿರುವ ಹಾಸನ ಜಿಲ್ಲೆ ಆಡಳಿತಾತ್ಮಕವಾಗಿ ಸಾಧನೆ ತೋರಿದರೂ ತಿರಸ್ಕೃತ ಅರ್ಜಿಗಳ ಪ್ರಮಾಣ ಹೆಚ್ಚಿನದಾಗಿರುವುದು ಪ್ರಶ್ನಾರ್ಥಕವಾಗಿದೆ. ದಾಖಲೆಗಳ ಕೊರತೆ, ವಂಶಾವಳಿ ಸಾಬೀತುಪಡಿಸುವ ಅಡಚಣೆಗಳು ಹಾಗು ನಿಯಮಗಳ ಕಟ್ಟುನಿಟ್ಟಿನ ಅನ್ವಯಿಕೆಯಿಂದ ಅನೇಕ ಅರ್ಜಿದಾರರು ಹೊರಗುಳಿದಿದ್ದಾರೆ.

ವಿಲೇವಾರಿಯಲ್ಲಿ ಜಿಲ್ಲೆ ಮುಂಚೂಣಿ

ಪೂರ್ವಜನರು ಪಡೆದಿರುವ ಇನಾಂ ಭೂಮಿ ಮಂಜೂರಾತಿಗಾಗಿ 2017ರಿಂದಲೂ ಅರ್ಜಿ ಗಳು ಸಲ್ಲಿಕೆಯಾಗಿದ್ದು, ರಾಜ್ಯದಲ್ಲಿ ಸಾವಿರಾರು ಅರ್ಜಿಗಳು ಬಾಕಿ ಉಳಿದಿವೆ. ಅರ್ಜಿಗಳ ವಿಲೇವಾರಿಯಲ್ಲಿ ಹಾಸನ ಜಿಲ್ಲೆ ಮುಂಚೂಣಿಯಲ್ಲಿದೆ. ಕಂದಾಯ ಸಚಿವ ಕೃಷ್ಣಬೈರೇಗೌಡ ಅವರ ನಿರ್ದೇಶನದ ಮೇರೆಗೆ ಜಿಲ್ಲೆಯಲ್ಲಿ ಅರ್ಜಿ ವಿಲೇವಾರಿ ಪ್ರಕ್ರಿಯೆ ಚುರುಕುಗೊಂಡಿತ್ತು.

ಗಂಡಸಿಯಲ್ಲಿ ದೇವೇಗೌಡರ ಪುತ್ಥಳಿ ನಿರ್ಮಾಣಕ್ಕೆ ಆಗ್ರಹ

• ಪ್ರಜೋದಯ ವರದಿ

ಅರಸೀಕೆರೆ: ತಾಲ್ಲೂಕಿನ ಗಂಡಸಿ ಹ್ಯಾಂಡ್ ಪೋಸ್ಟ್‌ನಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಪುತ್ಥಳಿ ನಿರ್ಮಿಸಬೇಕೆಂದು ಜೆಡಿಎಸ್ ಮುಖಂಡ ಎನ್.ಆರ್. ಸಂತೋಷ್ ಅವರು ಆಗ್ರಹಿಸಿದ್ದಾರೆ.

ಕರ್ನಾಟಕದ ಏಕೈಕ ಪ್ರಧಾನಿ ಹೆಚ್.ಡಿ.ದೇವೇಗೌಡರು ನಾಡು ಕಂಡ ಶ್ರೇಷ್ಠ ರಾಜಕಾರಣಿ ಯಾಗಿದ್ದಾರೆ. ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಈಗಾಗಲೇ ನಗರದಲ್ಲಿ ಬಸವೇಶ್ವರ ಪ್ರತಿಮೆ ನಿರ್ಮಿಸಿ ಸೈ ಎನಿಸಿಕೊಂಡಿದ್ದಾರೆ. ಶಾಸಕರು, ಮಂತ್ರಿ ದರ್ಜೆಯ ಗೃಹ ಮಂಡಳಿ ಅಧ್ಯಕ್ಷರೂ ಆಗಿರುವುದರಿಂದ ಈ ಕಾರ್ಯವನ್ನು ಸುಲಭವಾಗಿ ಮಾಡ ಬಹುದು. ಕಾಮಗಾರಿಗೆ ಕಾನೂನಿನ ಅಡೆತಡೆ ಬಂದರೂ ನಿವಾರಿಸುವ ಸಾಮರ್ಥ್ಯ ಶಿವಲಿಂಗೇಗೌಡ ಅವರಿಗಿದೆ. ದೇವೇಗೌಡರು ಹಾಸನದ ಹೆಮ್ಮೆ ಎಂಬುದು ಎಲ್ಲರಿಗೂ ತಿಳಿದ ವಿಚಾರ. ಆದ್ದರಿಂದ ಶಿವಲಿಂಗೇಗೌಡ ಅವರು ಜನತೆಯ ಇಚ್ಛೆಗೆ ಸ್ಪಂದಿಸಿ ಪುತ್ಥಳಿ ನಿರ್ಮಿಸಬೇಕು. ಈ ವಿಚಾರದಲ್ಲಿ ನಾನೇ ನಿಮ್ಮ ಮನೆಗೆ ಬಂದು ಮನವಿ ಸಲ್ಲಿಸಲು ತಯಾರಿದ್ದೇನೆ, ಅದಕ್ಕೆ ಸಮಯ ಕೊಡಿ ಎಂದು ಮನವಿ ಮಾಡಿದ್ದಾರೆ.

ಅರಸೀಕೆರೆ ಜನರ ಪರವಾಗಿ ದೇವೇಗೌಡರ ಪ್ರತಿಮೆ ನಿರ್ಮಾಣಕ್ಕೆ ಆಗ್ರಹಿಸುತ್ತೇನೆ. ಈ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸಬೇಡಿ ಎಂದು ಕೋರಿದ್ದಾರೆ.

ಅಪಘಾತ: ವ್ಯಕ್ತಿ ಸಾವು

• ಪ್ರಜೋದಯ ವರದಿ

ಬೇಲೂರು: ಪಿಕ್‌ಅಪ್ ವಾಹನ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟು ಮತ್ತೊಬ್ಬ ಗಂಭೀರ ಗಾಯಗೊಂಡಿರುವ ಘಟನೆ ತಾಲ್ಲೂಕಿನ ಚಳ್ಳೇನಹಳ್ಳಿ ಗ್ರಾಮದ ವಾಟೆಹಳ್ಳ ಸೇತುವೆ ಸಮೀಪ ನಡೆದಿದೆ. ಕಡೆಗರ್ಜೆ ಗ್ರಾಮದ ಹೆಚ್.ಆರ್. ಚಂದ್ರಶೇಖರ್ ಮೃತರು. ಹಿಂಬದಿ ಸವಾರ ವೆಂಕಟೇಶ್ ಗಾಯಾಳು. ಏ. 24 ರಂದು ಚಂದ್ರ ಶೇಖರ್ ಹಾಗು ವೆಂಕಟೇಶ್ ಅವರು ಚಿಕ್ಕಮಗಳೂರಿನ ಮರ್ಲೆ ಗ್ರಾಮದ ಜಮೀನಿನಲ್ಲಿ ಕೆಲಸ ಮುಗಿಸಿ ಮನೆಗೆ ವಾಪಾಸಾಗುತ್ತಿದ್ದಾಗ ಸಕಲೇಶಪುರ ಕಡೆಯಿಂದ ವೇಗವಾಗಿ ಬಂದ ಪಿಕ್‌ಅಪ್ ವಾಹನ ಡಿಕ್ಕಿಯಾಗಿದೆ. ತಲೆಗೆ ಬಲವಾದ ಪೆಟ್ಟು ಬಿದ್ದ ಹಿನ್ನಲೆಯಲ್ಲಿ ಚಂದ್ರಶೇಖರ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ವೆಂಕಟೇಶ್ ಅವರ ಕಾಲು, ಕೈ, ತಲೆಗೆ ಪೆಟ್ಟಾಗಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಅರೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಣಕಾಸು ವೈಷಮ್ಯ: ಉದ್ಯಮಿ ಮೇಲೆ ಮಾರಣಾಂತಿಕ ಹಲ್ಲೆ

• ಪ್ರಜೋದಯ ವರದಿ

ಹೊಳೆನರಸೀಪುರ: ಹಣಕಾಸು ವೈಷಮ್ಯದಿಂದ ಉದ್ಯಮಿ ಮೇಲೆ ಮಚ್ಚು-ಲಾಂಗ್‌ನಿಂದ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಪಟ್ಟಣದಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ತಾಲ್ಲೂಕಿನ ಜೋಡಿಗುಬ್ಬಿ ಗ್ರಾಮದ ಮಂಜೇಗೌಡ ಗಾಯಾಳು. ನಾಗಲಾಪುರ ಕ್ರಾಸ್ ಬಳಿ ಬೈಕ್‌ನಲ್ಲಿ ಬಂದ ಮೂವರು ಅಪರಿಚಿತರು ಏಕಾಏಕಿ ಹಲ್ಲೆ ನಡೆಸಿದ್ದಾರೆ. ತಲೆ ಹಾಗು ಕಾಲಿನ ಭಾಗಕ್ಕೆ ಮಚ್ಚಿನಿಂದ ಬೀಸಿದ್ದರಿಂದ ಗಂಭೀರ ಗಾಯಗಳಾಗಿವೆ.

ಮುಖಕ್ಕೆ ಕಪ್ಪು ಬಟ್ಟೆ ಹಾಗು ಹೆಲ್ಮೆಟ್ ಧರಿಸಿದ್ದರಿಂದ ಅವರ ಗುರುತು ಪತ್ತೆಯಾಗಿಲ್ಲ. ತಕ್ಷಣವೇ ಮಂಜೇಗೌಡ ಅವರನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಲಾಯಿತು. ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಗ್ರಾಮಾಂತರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಜೋಡಿಗುಬ್ಬಿಯಲ್ಲಿ ಪೆಟ್ರೋಲ್ ಬಂಕ್, ಬಾರ್ ಮತ್ತು ಟ್ರ್ಯಾಕ್ಟರ್ ಶೋ ರೂಂ ಹೊಂದಿರುವ ಮಂಜೇಗೌಡ ಸಾಕಷ್ಟು ಜನರೊಂದಿಗೆ ಹಣಕಾಸಿನ ವ್ಯವಹಾರ ಹೊಂದಿದ್ದಾರೆ. ಇದೇ ವಿಚಾರಕ್ಕೆ ಹಲವು ಬಾರಿ ಗಲಾಟೆಗಳು ನಡೆದಿವೆ. ಕಳೆದ ವರ್ಷ ಚನ್ನರಾಯಪಟ್ಟಣದ ವ್ಯಕ್ತಿಯೊಬ್ಬರ ಜೊತೆ ಜೋರು ವಾಗ್ವಾದ ನಡೆದಿತ್ತು ಎಂದು ತಿಳಿದುಬಂದಿದೆ.

45 ಲಕ್ಷ ರೂ.ಗಾಗಿ ನಡೆದ ಹಲ್ಲೆ

ಘಟನೆ ಕುರಿತು ಗಾಯಾಳು ಮಂಜೇಗೌಡ ಅವರು ಮಾತನಾಡಿ, ರಾಜೇಶ್, ಮಹೇಂದ್ರ ಹಾಗು ಮತ್ತೊಬ್ಬ ನನಗೆ 45 ಲಕ್ಷ ರೂ. ಕೊಡಬೇಕು. ಅದನ್ನು ಕೇಳಿದ್ದಕ್ಕೆ ನನ್ನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದರು. ಹಣ ಕೊಡಲು ಸಾಧ್ಯವಾಗದೆ ನನ್ನ ಮೇಲೆ ಹಲ್ಲೆ ನಡೆಸಿದ್ದಾರೆಂದು ಆರೋಪಿಸಿದರು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ವಿದ್ಯಾರ್ಥಿಗಳು ಸಾಹಿತ್ಯ ಓದುವ ಅಭಿರುಚಿ ಬೆಳೆಸಿಕೊಳ್ಳಿ

• ಪ್ರಜೋದಯ ವರದಿ

ಹಾಸನ: ಜೀವನದಲ್ಲಿ ಒಳ್ಳೆಯತನ ಬೆಳೆಸಿಕೊಳ್ಳಬೇಕೆಂದರೆ ಪುಸ್ತಕ ಓದುವುದು ಅವಶ್ಯಕ. ತಾಳ್ಮೆ, ಮಾನವೀಯತೆ ಹಾಗು ವ್ಯಕ್ತಿತ್ವ ವಿಕಸನಕ್ಕೆ ಓದು ನೆರವಾಗುತ್ತದೆಂದು ನಿವೃತ್ತ ಮುಖ್ಯ ಅರಣ್ಯ ಅಧಿಕಾರಿ ಯತೀಶ್ ಕುಮಾರ್ ಅವರು ಅಭಿಪ್ರಾಯಪಟ್ಟರು.

ನಗರದ ಮಲೆನಾಡು ತಾಂತ್ರಿಕ ಮಹಾ ವಿದ್ಯಾಲಯದಲ್ಲಿ ಶನಿವಾರ ಏರ್ಪಡಿಸಿದ್ದ ಮುಕ್ತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಪಠ್ಯ ಪುಸ್ತಕ ಅಧ್ಯಯನ ಜೊತೆಗೆ ಸಾಹಿತ್ಯ, ಪ್ರಚಲಿತ ವಿದ್ಯಮಾನಗಳ ಕುರಿತು ಆಸಕ್ತಿ ಬೆಳೆಸಿಕೊಳ್ಳಬೇಕು ಎಂದರು.

ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಚೌಡುವಳ್ಳಿ ಜಗದೀಶ್ ಅವರು ಮಾತನಾಡಿ, ಅರಣ್ಯ ಇಲಾಖೆಯಲ್ಲಿ ಉನ್ನತ ಅಧಿಕಾರಿಗಳಾಗಿ ಕೆಲಸ ಮಾಡಿ ಜೊತೆಗೆ ಹಲವಾರು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಪುಸ್ತಕಗಳನ್ನು ಯತೀಶ್ ಕುಮಾರ್ ಬರೆದಿದ್ದಾರೆ. ಅವರ ಆಡಳಿತ ಅನುಭವ ಮತ್ತು

ಸಾಮಾಜಿಕ ಜೀವನ ಎಲ್ಲರಿಗೂ ಮಾದರಿಯಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆ ಅಧ್ಯಕ್ಷ ಆರ್.ಟಿ. ದ್ಯಾವೇಗೌಡ ಅವರು ಮಾತನಾಡಿ, ಯತೀಶ್ ಕುಮಾರ್ ಇಂಜಿನೀಯರ್ ಪದವಿಯನ್ನು ಪಡೆದು ಅರಣ್ಯ ಇಲಾಖೆಯಲ್ಲಿ ಹಲವಾರು ಉನ್ನತ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಅವರು ಪರಿಸರ ಜಾಗೃತಿ ಹಾಗು ಸಾಮಾಜಿಕ ಕಾರ್ಯಗಳಲ್ಲಿ ತಮ್ಮದೇಯಾದ ಛಾಪು ಮೂಡಿಸಿದ್ದಾರೆಂದರು.

ಪ್ರಾಂಶುಪಾಲ ಡಾ. ಹೆಚ್.ಜೆ.ಅಮರೇಂದ್ರ ಮಾತನಾಡಿದರು. ಪ್ರಾಧ್ಯಾಪಕಿ ಡಾ.ಬಿ. ಉಮಾ, ಶಿಕ್ಷಣ ಸಂಸ್ಥೆಯ ಖಜಾಂಚಿ ಹೆಚ್.ಡಿ. ಪಾರ್ಶ್ವನಾಥ್, ಅಭಿವೃದ್ಧಿ ಅಧಿಕಾರಿ ಡಾ. ಇಂದ್ರ ಬಹದ್ದೂರ್, ಸಿವಿಲ್ ವಿಭಾಗದ ಮುಖ್ಯಸ್ಥ ಡಾ.ಸುಮನ್ ಜಯಪ್ರಕಾಶ್ ಮತ್ತಿತರರಿದ್ದರು.

ಅರಸೀಕೆರೆ ಕ್ಷೇತ್ರದಲ್ಲಿ ಕುರುಬ ಸಮುದಾಯಕ್ಕೆ ಅನ್ಯಾಯ

• ಪ್ರಜೋದಯ ವರದಿ

ಹಾಸನ: ಅರಸೀಕೆರೆ ಕ್ಷೇತ್ರದಲ್ಲಿ ಕುರುಬ ಸಮುದಾಯವನ್ನು ಕಡೆಗಣಿಸುವ ಜೊತೆಗೆ ನಿರಂತರವಾಗಿ ಅನ್ಯಾಯ ಮಾಡಿಕೊಂಡು ಬರಲಾಗುತ್ತಿದೆಂದು ಜಿಲ್ಲಾ ಕುರುಬ ಸಂಘದ ಮುಖಂಡ ಮಹಾಲಿಂಗಪ್ಪ ಅವರು ಆರೋಪಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಹಿರಂಗ ಸಭೆಗಳಲ್ಲಿ ಸಮಾಜದ ಮುಖಂಡರು ಹಾಗು ಸ್ವಾಮೀಜಿಯನ್ನು ಅವಮಾನಿಸುವ ಘಟನೆಗಳು ನಡೆಯುತ್ತಿವೆ.ಸಮಾಜದ ಅಭಿವೃದ್ಧಿ, ಮೂಲಭೂತ ಸೌಲಭ್ಯ, ಸಮುದಾಯ ಭವನಗಳ ನಿರ್ಮಾಣ, ನೀರಾವರಿ ಯೋಜನೆಗಳಲ್ಲಿ ತಾರತಮ್ಯ ಮಾಡುತ್ತಿರುವುದನ್ನು ಖಂಡಿಸಿ, ಮೇ ತಿಂಗಳಲ್ಲಿ ತಾಲ್ಲೂಕಿನ ಚಿನ್ನೇನಹಳ್ಳಿ ಗೇಟ್ ಬಳಿ ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಸಿದರು.

ನಗರದಲ್ಲಿ ಸಂಗೊಳ್ಳಿ ರಾಯಣ್ಣ ಅವರ ಪ್ರತಿಮೆ ಮಾಡುತ್ತಿರುವುದು ಸ್ವಾಗತಾರ್ಹ. ಸಿಮೆಂಟ್ ಮೂಲಕ ಬೇಕಾಬಿಟ್ಟಿಯಾಗಿ ನಿರ್ಮಿಸಲಾಗುತ್ತಿದೆ. ನಾಡಿನ ಹೆಮ್ಮೆಯ ಸ್ವಾತಂತ್ರ್ಯ ಹೋರಾಟಗಾರ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ಕಲ್ಲಿನಿಂದಲೇ ಮಾಡಬೇಕು. ಅದರಿಂದ ಪ್ರತಿಮೆ ಶಾಶ್ವತವಾಗಿ ಉಳಿಯಲಿದೆ. ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಕುರುಬ

ಸಮುದಾಯ ಭವನ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂದು ಒತ್ತಾಯಿಸಿದರು.

ತಾಲ್ಲೂಕಿನಲ್ಲಿ ನಮ್ಮ ಸಮುದಾಯದವರ ಮೇಲೆ ವಿನಾಕಾರಣ ಪ್ರಕರಣ ದಾಖಲು ಮಾಡಲಾಗುತ್ತಿದೆ. ಇದು ತಕ್ಷಣ ನಿಲ್ಲಬೇಕು. ರಾಜಕೀಯ ದ್ವೇಷದಿಂದ ಪ್ರಕರಣ ದಾಖಲಿಸುವುದು ಪ್ರಜಾಪ್ರಭುತ್ವಕ್ಕೆ ಮಾರಕ. ಅಧಿಕಾರ ದುರುಪಯೋಗ ಮತ್ತು ರಾಜಕೀಯ ತಾರತಮ್ಯ ಅರಸೀಕೆರೆಯಲ್ಲಿ ಹೆಚ್ಚಾಗಿದೆ. ಅರಸೀಕೆರೆಯಲ್ಲಿ ನಡೆಯುತ್ತಿರುವ ರಾಜಕೀಯ ತಾರತಮ್ಯ ತಕ್ಷಣ ನಿಲ್ಲಿಸಿ, ಕುರುಬ ಸಮಾಜ, ರೈತರು ಹಾಗು ಬಡಜನರ ನ್ಯಾಯಯುತ ಬೇಡಿಕೆಗಳನ್ನು ಸರ್ಕಾರ ಶೀಘ್ರ ಈಡೇರಿಸಬೇಕು. ಇಲ್ಲವಾದರೆ ಹೋರಾಟವನ್ನು ಇನ್ನಷ್ಟು ತೀವ್ರ ಗೊಳಿಸಲಾಗುವುದೆಂದು ಎಚ್ಚರಿಸಿದರು.

ತಿಪಟೂರು-ದುದ್ದ-ಹಾಸನರಸ್ತೆ ಸಂಪೂರ್ಣ ಹಾಳಾಗಿದೆ. ತಕ್ಷಣ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಬೇಕು. ಗಂಡಸಿ ಭಾಗದ ಏತ ನೀರಾವರಿ ಯೋಜನೆಯಲ್ಲಿ ರಾಜಕೀಯ ಹಸ್ತಕ್ಷೇಪ ಹೆಚ್ಚಾಗಿದೆ. ಕೆಲ ಹಳ್ಳಿಗಳನ್ನು ಯೋಜನೆಯಿಂದ ಹೊರಗಿಡಲಾಗಿದೆ. ನೀರಾವರಿ ಸೌಲಭ್ಯ ಸಿಗದೆ ರೈತರು ಬೆಳೆ ನಷ್ಟ ಅನುಭವಿಸುತ್ತಿದ್ದಾರೆ. ಇದು ಹೀಗೆಯೇ ಮುಂದುವರಿದರೆ ಪ್ರತಿಭಟನೆ ಹಾದಿ ಹಿಡಿಯುವುದು ಅನಿವಾರ್ಯವಾಗಿದೆ ಎಂದರು.

ಯುವ ಮುಖಂಡ ಭರತ್ ಮಾತನಾಡಿ, ತಾಲ್ಲೂಕಿನಲ್ಲಿ ಕುರುಬ ಸಮಾಜದ ಹಕ್ಕುಗಳನ್ನು ನಿರ್ಲಕ್ಷ್ಯ ಮಾಡಲಾಗುತ್ತಿದೆ. ಸಂಗೊಳ್ಳಿ ರಾಯಣ್ಣ ಪ್ರತಿಮೆ ನಿರ್ಮಾಣದಿಂದ ಹಿಡಿದು ಸ್ಥಳೀಯ ಶಾಸಕರು ನಮ್ಮ ಸಮುದಾಯದ ಕೆಲಸ ಕಾರ್ಯಗಳ ಬಗ್ಗೆ ನಿರ್ಲಕ್ಷ್ಯ ಮಾಡುತ್ತಿದ್ದರೂ, ನಮ್ಮ ಸಮುದಾಯದ ಹಿರಿಯರು ಶಾಸಕರನ್ನು ಸಮರ್ಥಿಸಿಕೊಳ್ಳುತ್ತಿರುವುದು ದುರದೃಷ್ಟಕರವೆಂದು ಬೇಸರ ಹೊರ ಹಾಕಿದರು.

20 ವರ್ಷಗಳಿಂದ ಅರಸೀಕೆರೆ ತಾಲ್ಲೂಕು ಹಾಗು ವಿವಿಧ ಹೋಬಳಿ ಕೇಂದ್ರಗಳಲ್ಲಿ ಕುರುಬ ಸಮುದಾಯ ಭವನ ಇನ್ನೂ ಪೂರ್ಣಗೊಂಡಿಲ್ಲ. ಹಲವು ಬಾರಿ ಜನಪ್ರತಿನಿಧಿಗಳು ಹಾಗು ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಸ್ಪಂದನೆ ಸಿಕ್ಕಿಲ್ಲ. ಅದರಿಂದ ನಮ್ಮ ಸಮುದಾಯಕ್ಕೆ ತೀವ್ರ ತೊಂದರೆ ಆಗಿದೆ ಎಂದರು.

ಸಮಾಜದ ಮುಖಂಡರಾದ ಶಿವಬಸಪ್ಪ, ವಿರೂಪಾಕ್ಷ, ಲೋಕೇಶ್ ಇದ್ದರು.

ಅಂಬೇಡ್ಕರ್ ಪ್ರತಿಮೆ ಹಿಂಭಾಗದಲ್ಲಿ ಸ್ಥಳ ನಿಗದಿ

ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆಗೆ ನಿಷೇಧ

• ಪ್ರಜೋದಯ ವರದಿ

ಹಾಸನ: ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಇನ್ನುಮುಂದೆ ಯಾವುದೇ ಪ್ರತಿಭಟನೆ, ಧರಣಿ ಹಾಗು ಅಹೋರಾತ್ರಿ ಹೋರಾಟಗಳಿಗೆ ಅವಕಾಶ ಇರುವುದಿಲ್ಲವೆಂದು ಜಿಲ್ಲಾಡಳಿತ ಸ್ಪಷ್ಟಪಡಿಸಿದೆ.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರ ಆದೇಶದಂತೆ ಶನಿವಾರ ಪೊಲೀಸರು ಧರಣಿ ನಿರತರನ್ನು ಅಂಬೇಡ್ಕರ್ ಪ್ರತಿಮೆ ಹಿಂಭಾಗದ ನಿಗದಿತ ಸ್ಥಳಕ್ಕೆ ಸ್ಥಳಾಂತರಿಸಿದರು. ಈ ವೇಳೆ ಹೆಚ್ಚಿನ ಪೊಲೀಸ್ ಬಂದೋಬಸ್ತ್ ಒದಗಿಸಲಾಗಿತ್ತು. ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಇದುವರೆಗೆ ವಿವಿಧ ಸಂಘಟನೆಗಳು, ಸಾರ್ವಜನಿಕರು ಹಾಗು ರೈತರು ಪ್ರತಿಭಟನೆ ನಡೆಸಲು ಅವಕಾಶ ನೀಡಲಾಗುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಪ್ರತಿಭಟನಾಕಾರರು ಸ್ಥಳದಲ್ಲೇ ಅಡುಗೆ ಮಾಡಲು ಒಲೆ ಹಚ್ಚುತ್ತಿರುವುದು, ಆವರಣದಲ್ಲಿ ಸರ್ಕಾರಿ ವಾಹನಗಳು ನಿಲ್ಲಿಸಿರುವುದು ಸೇರಿ ಬೆಂಕಿ ಅವಘಡದ ಭೀತಿ ಹೆಚ್ಚಿ ರುವುದರಿಂದ ಮುನ್ನೆಚ್ಚರಿಕಾ ಕ್ರಮವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅಧಿಕಾರಿ ಗಳು ತಿಳಿಸಿದ್ದಾರೆ.



ಇದೇ ಸ್ಥಳವು ಹಲವು ಸರ್ಕಾರಿ ಕಚೇರಿಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಯಾಗಿರುವುದರಿಂದ ಸಾರ್ವಜನಿಕರ ಓಡಾಟಕ್ಕೂ ಅಡಚಣೆ ಉಂಟಾಗುತ್ತಿತ್ತು. ಸರ್ಕಾರಿ ಕೆಲಸಗಳಿಗೆ ಆಗಮಿಸುವ ನಾಗರಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದರು. ಆಡಳಿತ ಕಾರ್ಯಗಳಿಗೂ ವ್ಯತ್ಯಯ ಉಂಟಾಗುತ್ತಿತ್ತು ಎಂದು ತಿಳಿಸಲಾಗಿದೆ.

ಜಿಲ್ಲಾಧಿಕಾರಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಭದ್ರತೆ, ಸಾರ್ವಜನಿಕ ಸೌಲಭ್ಯ ಹಾಗು ಆಡಳಿತ ಸುಗಮತೆಯನ್ನು ಗಮನದಲ್ಲಿಟ್ಟುಕೊಂಡು ಪ್ರತಿಭಟನೆಗಳನ್ನು ನಿಗದಿತ ಸ್ಥಳದಲ್ಲಿಯೇ ನಡೆಸುವಂತೆ ನಿರ್ಧಾರ ಕೈಗೊಳ್ಳಲಾಯಿತು. ಅದರಂತೆ ಜಿಲ್ಲಾಧಿಕಾರಿ ಕಚೇರಿ ಎದುರು ಹೋರಾಟವನ್ನು ನಿಷೇಧಿಸಿ, ಅಂಬೇಡ್ಕರ್ ಪ್ರತಿಮೆ ಹಿಂಭಾಗದಲ್ಲಿ ಅವಕಾಶ ಕಲ್ಪಿಸಲಾಗಿದೆ.

ಜಿಲ್ಲಾಧಿಕಾರಿ ಈ ಆದೇಶದ ಅನ್ವಯ, ಹಕ್ಕುಪತ್ರಗಳನ್ನು ವಿತರಿಸಿ ನಾಲ್ಕು ವರ್ಷಗಳಾದರೂ ಖಾತೆ ಮಾಡಿಕೊಡದೇ ವಿಳಂಬ ಮಾಡಲಾಗುತ್ತಿದೆ ಎಂದು ಆರೋಪಿಸಿ ಅರಕಲಗೂಡು ತಾಲ್ಲೂಕಿನ ರಾಮನಾಥಪುರ ಗ್ರಾಮದ ವಸತಿ ರಹಿತರು ನಡೆಸುತ್ತಿದ್ದ ಅನಿರ್ದಿಷ್ಟಾವಧಿ ಧರಣಿ ಯನ್ನು ಹೊಸ ಸ್ಥಳಕ್ಕೆ ಸ್ಥಳಾಂತರಿಸಲಾಯಿತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಕಟ್ಟುನಿಟ್ಟಿನ ಭದ್ರತೆ ಕೈಗೊಂಡಿದ್ದರು.

ಪ್ರತಿಭಟನಾಕಾರರಿಗೆ ಹೊಸ ಸ್ಥಳದಲ್ಲಿ ಶಾಂತಿಯುತವಾಗಿ ಹೋರಾಟ ಮುಂದುವರಿಸಲು ಸೂಚನೆ ನೀಡಲಾಗಿದೆ. ಜಿಲ್ಲಾಡಳಿತದ ಈ ಕ್ರಮಕ್ಕೆ ಸಾರ್ವಜನಿಕ ವಲಯದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಭದ್ರತೆ ಮತ್ತು ಆಡಳಿತ ಸುಗಮತೆಗೆ ಅಗತ್ಯ ಕ್ರಮವೆಂದು ಕೆಲವರು ಅಭಿಪ್ರಾಯಪಟ್ಟರೆ, ಸ್ಥಳಾಂತರದ ಬಗ್ಗೆ ಕೆಲವು ಸಂಘಟನೆಗಳು ಅಸಮಾಧಾನ ವ್ಯಕ್ತಪಡಿಸಿವೆ.

> ಜೋಗದ ಝೋಕು, ಜೋಕ್ ಆಗಿಬಿಡುತ್ತದೆ. ಒಣ ಮರಗಳಲ್ಲಿ ಗಿಳಿಗಳು ಕೂಡ ಕೂತು ಕೂಗುವುದಿಲ್ಲ. ಪಾರಿವಾಳಗಳು ಮೆಟ್ರೋ ಪಿಲ್ಲರುಗಳ ಎಡೆಯಲ್ಲಿ ಕೂತು ಘೂಕರಿಸುತ್ತವೆ. ಹೊಳೆ ತೊರೆಗಳು ಚರಂಡಿಗಳಾಗಿ, ಕಸ ಕಟ್ಟಿಕೊಂಡು ಗಬ್ಬು ನಾತ. ನೀರು ಕಂಡಲ್ಲ ರಜೆ ಪಡೆದ ಜನರ ನೂಕಾಟ. ಬೆಟ್ಟಗಳಲ್ಲಿ ಬೆಂಕಿ. ಜನ ನಡೆಯುವ ನೆಲವೂ ಬೆಂಕಿ. ಪ್ರಾಣ ಒಂದು ಗುಟುಕು ನೀರಿಗಾಗಿ, ಒಂದು ಬೀಸು ತಂಗಾಳಿಗಾಗಿ ಹಂಬಲಿಸುತ್ತದೆ.

ವ್ಯರ್ಥನಂದನದಲ್ಲಿ ಕ್ರೂರ ಏಪ್ರಿಲ್ ಮಾಸ

ಕಾಡುದಾರಿ ಮುತ್ತುಗದ ತರುಗಳಲ್ಲಿ ಹುಲಿಯುಗುರಿನಂಥ ಕೆಂಪು ಹೊಳೆಯುವ ಹೂಗಳು. ಗುಲ್‌ಮೊಹರ್ ಮರಗಳಲ್ಲಿ ಬೆಂಕಿಯಂತೆ ಉರಿಯುವ ಕುಸುಮಗಳು. ಮರಗಳ ನೆರಳಿನಲ್ಲಿ ದಣಿವಾರಿಸಿಕೊಳ್ಳುತ್ತ ಕುಳಿತ ಜನ ಜಾನುವಾರು. ನಿಂಬೆ ಹಣ್ಣಿಗೆ ಒಂದಕ್ಕೆ ಹನ್ನೆರಡು ರೂಪಾಯಿ. ಸೌತೆಕಾಯಿ, ಕಲ್ಲಂಗಡಿ ಹೆಚ್ಚಿಕೊಡುವ, ತಣ್ಣನೆಯ ಮಡಿಕೆಯಿಂದ ಮಜ್ಜಿಗೆ ಎತ್ತಿಕೊಡುವ ತಳ್ಳುಗಾಡಿಗಳು.

ನೆರಳು ಸಿಕ್ಕಲ್ಲಿ ಮಲಗಿ ಹಾಗೇ ನಿದ್ದೆ ಹೋದ ದುಡಿದು ದಣಿದ ಮಂದಿ. ಮೇಲೆ ಸೊಕ್ಕಿನಿಂದ ಉರಿ ಉರಿಯುವ ಸೂರ್ಯ. ಏಪ್ರಿಲ್ ನ ಕೊನೆಯ ದಿನಗಳನ್ನು ಕಾಣುತ್ತ, ಮೇ ತಿಂಗಳಿನ ಇನ್ನಷ್ಟು ದುರ್ಭರ ದಿನಗಳನ್ನು ಎದುರು ನೋಡುತ್ತ ಕವಿ ಟಿಎಸ್ ಎಲಿಯಟ್‌ನ ವ್ಯರ್ಥನಂದನ ಕವಿತೆಯ ಮೊದಲ ಸಾಲು ನೆನಪಿನಾಳದಿಂದ ಮೇಲೆದ್ದು ಬರುತ್ತವೆ- ಬಲು ಕ್ರೂರ ಮಾಸ ಈ ಏಪ್ರಿಲ್.



ಈ ಸಲದ ಏಪ್ರಿಲ್ ಅತಿ ಕ್ರೂರ ಎಂದು, ಪ್ರತಿಸಲವೂ ಅನಿಸುತ್ತದೋ ಏನೋ. ಪ್ರತಿ ವರ್ಷವೂ ಕಳೆದ ಸಲಕ್ಕಿಂತ ಹೆಚ್ಚು ಬೆದರಿಸುತ್ತದೆ, ಬೆವರಿಸುತ್ತದೆ. ಕನ್ನಂಬಾಡಿ ಕಾವೇರಿ ಕೃಷ್ಣೆಗಳು ತಳ ಹಿಡಿಯುತ್ತವೆ. ಅಣೆಕಟ್ಟಿನ ನೀರು ಎತ್ತಿ ಬಿಡಬೇಕೋ ಬೇಡವೋ ಎಂಬ ವಿಚಾರಕ್ಕೆ ಸಾಮ್ರಾಜ್ಯಗಳು ಉರುಳುತ್ತವೆ.

ಜೋಗದ ಝೋಕು, ಜೋಕ್ ಆಗಿಬಿಡುತ್ತದೆ. ಒಣ ಮರಗಳಲ್ಲಿ ಗಿಳಿಗಳು ಕೂಡ ಕೂತು ಕೂಗುವುದಿಲ್ಲ. ಪಾರಿವಾಳಗಳು ಮೆಟ್ರೋ ಪಿಲ್ಲರುಗಳ ಎಡೆಯಲ್ಲಿ ಕೂತು ಘೂಕರಿಸುತ್ತವೆ. ಹೊಳೆ ತೊರೆಗಳು ಚರಂಡಿಗಳಾಗಿ, ಕಸ ಕಟ್ಟಿಕೊಂಡು ಗಬ್ಬು ನಾತ. ನೀರು ಕಂಡಲ್ಲ ರಜೆ ಪಡೆದ ಜನರ ನೂಕಾಟ. ಬೆಟ್ಟಗಳಲ್ಲಿ ಬೆಂಕಿ. ಜನ ನಡೆಯುವ ನೆಲವೂ ಬೆಂಕಿ. ಪ್ರಾಣ ಒಂದು ಗುಟುಕು ನೀರಿಗಾಗಿ, ಒಂದು ಬೀಸು ತಂಗಾಳಿಗಾಗಿ ಹಂಬಲಿಸುತ್ತದೆ.

ಹಾಗೆ ನೋಡಿದರೆ ಏಪ್ರಿಲ್, ಮೇ ತಿಂಗಳಿನಷ್ಟು ಒಣ ಮಾಸವೇನಲ್ಲ. ಕಳಚಿಕೊಂಡ ಒಣ ಎಲೆಗಳ ಸ್ಟಾಕು ಯುಗಾದಿಗೇ ಮುಗಿಸಿ, ಹೊಸ ಚಿಗುರುಗಳ ಆಮದು ಮಾಡಿಕೊಂಡ ಮರಗಳು ಏಪ್ರಿಲ್‌ನಲ್ಲಿ ಹಸಿರಿನಿಂದ ಕಳೆಕಳೆಯಾಗಿರುತ್ತವೆ. ರಸ್ತೆ ಬದಿಯ ಟ್ಯುಬೀಬಿಯ, ಮುತ್ತುಗ, ಹೊಂಗೆ, ಸಂಪಿಗೆ ಮರಗಳು ಚೈತ್ರರಥಗಳಂತೆ ಹೂಗಳ ಸೂಡಿ ಧರಿಸಿ, ಸಂಜೆ ಮುಂಜಾನೆಗಳಲ್ಲಿ ಧರೆಗೂ ಚೆಲ್ಲಿ ಬಿಡುತ್ತವೆ.

ಹೂ ತಳೆದ ತರುಗಳ ಕೆಳಗೆ ನಡೆಯುವುದು ಬಲು ನಾಜೂಕು ಭಾಗ್ಯ. ಕತ್ತೆತ್ತಿ ನೋಡಿದರೆ ಪುಷ್ಪ ವೃಷ್ಟಿ. ಹೊಂಗೆ ಮರಗಳಡಿಯಲ್ಲಿ ಆಟೋ ಮಾಮ ರಿಕ್ಷಾ ನಿಲ್ಲಿಸಿ ದಣಿದ ದೇಹವನ್ನದರಲ್ಲಿ ಚೆಲ್ಲಿ ನಿದ್ದೆ ಹೋಗಿದ್ದನು. ನೀರಿನದೊಂದೇ ತತ್ವಾರ. ಕೊಂಡ ಒಂದು ಬಾಟಲಿ ನೀರು ಗಂಟಲಿಗೂ ಕತ್ತಿಗೂ ಎದೆಗೂ ಸಮಾನವಾಗಿ ಜೀವವೂಡುವ ಅಮೃತ.

ಆದರೂ ಯಾಕೆ ಹೇಳುತ್ತಾನೆ ಎಲಿಯಟ್ ಏಪ್ರಿಲ್ ಕ್ರೂರ ಮಾಸವೆಂದು? ಅವನು ಆ ಪದ್ಯ ಬರೆಯುತ್ತಿದ್ದ ಹೊತ್ತಿಗೆ ಮೊದಲನೇ ಮಹಾಯುದ್ಧ ಮುಗಿದಿತ್ತು. 1922ರಲ್ಲಿ ಇದನ್ನವನು ಕೂತು ಬರೆದಾಗ, ಆಗಷ್ಟೇ ಅವನ ಮುಂದೆ, ಮಹಾಸಮರದಲ್ಲಿ ಮಡಿದ ಎರಡು ಕೋಟಿ ಜನರ ಕಳೇಬರಗಳು ಕಾಣಿಸಿದ್ದಿರಬಹುದು.

ಯುರೋಪು ಬಹುತೇಕ ಸುಟ್ಟು ಕಪ್ಪಾಗಿತ್ತು. ಯುದ್ಧಾತುರ ನಾಯಕರು ಸೃಷ್ಟಿಸಿದ ಆ ಬೂದಿಯ ರಾಶಿಯಿಂದ ಕೋಟ್ಯಂತರ ಜನರ ನಿಟ್ಟುಸಿರು ಹೊಗೆಯಾಡುತ್ತಿತ್ತು. ಅಲ್ಲಿಂದಲೇ ಬಹುಶಃ ಹೊಸ ಹುಟ್ಟಿನ ಧ್ಯಾನವೂ ಶುರುವಾಯಿತಿರಬೇಕು. ಆ ಹೊಸ ಮೊಳಕೆಯ ಹಂಬಲವೇ ಎಲಿಯಟ್‌ನ ಕಾವ್ಯದ ರೂಹು ಕೂಡ ಆಯಿತು.

ಅವನು ವ್ಯರ್ಥನಂದನವೆಂದು ಕರೆದುದು ಪ್ರೀತಿ ಹುಟ್ಟದ ಮನುಷ್ಯನೊಳಗಿನ ಜಗತ್ತನ್ನು. ಮತ್ತು ಏಪ್ರಿಲ್ ಅನ್ನು ಕ್ರೂರ ತಿಂಗಳೆಂದುದು ಆ ಮಾಸದ ಬಿರುಬಿಸಿಲಿಗಲ್ಲ. ಕಳಚಿದ ಎಲೆ ನೆಲ ತಾಗುವ ಮುನ್ನ ಹೊಸ ಚಿಗುರನ್ನು ಒಂದು ಕನಸಿನ ಮೊದಲ ಕ್ಷಣದಂತೆ ಅರಳಿಸುವ ಕಷ್ಟ, ಮಗುವನ್ನು ಗರ್ಭದಿಂದ ಹೊರದೂಡುವ ತಾಯಿಯ ಪ್ರಸವದ ನೋವು ಇದೆಯಲ್ಲ- ಅದರ ಹಿನ್ನೆಲೆಯಲ್ಲಿ. ಮತ್ತೀಗ ಈ ಏಪ್ರಿಲ್ ಮಾಸವನ್ನೇ ನೋಡಿ. ಇದರ ಬರ್ಬರತೆ ಇಲ್ಲಿಗೇ ನಿಲ್ಲುವ ಯಾವ ಲಕ್ಷಣವೂ ಕಾಣುತ್ತಿಲ್ಲ.

ಸುಡುವ ಧಗೆ ಹಾಗಿರಲಿ. ಜಗತ್ತಿನ ಅತ್ಯಂತ ಶಕ್ತ ದೇಶದ ನಾಯಕರು ಅತಿ ಕ್ರೂರಿಯೂ ಆಗಿರುವ, ಪ್ರಪಂಚಕ್ಕೆ ಅಗತ್ಯವಿಲ್ಲದ ಯುದ್ಧವನ್ನು ತಂದಿಕ್ಕಿರುವ ಬಗೆಯನ್ನು ನೋಡಿ. ಇಂಥ ನಾಯಕರ ಎದೆಗಳು ಸದಾ ಏಪ್ರಿಲ್ ಮಾಸದ ಬಣಗುಡುವ ಗದ್ದೆ ಬಯಲುಗಳು. ಇಲ್ಲಿ ಹಸಿರಿನ ಹೆಸರೂ ಜನಿಸದು.

ಬಡಿದಾಡುವು ದಕ್ಕಾಗಿಯೇ ಹುಟ್ಟಿಕೊಂಡಂತಿರುವ ಈ ದೊರೆಗಳಿಂದಾಗಿ ಈ ಏಪ್ರಿಲ್ ನ ಕ್ರೌರ್ಯ ಮೇ ಜೂನ್ ಗೂ ವಿಸ್ತರಿಸುವ, ಮತ್ತಾಚೆಗೂ ಬೆಳೆಯುವ ಎಲ್ಲ ಸಾಧ್ಯತೆಯೂ ಇದೆ. ತುಟ್ಟಿಯಾದ ಪೆಟ್ರೋಲ್ ಡೀಸೆಲ್‌ನ ಘಾಟು ಗಾಳಿ ತುಂಬಾ ಹರಡಿ ಉಸಿರುಗಟ್ಟಿಸುತ್ತಿದೆ.

ಕೈಚಾಚಲಿರುವ ಶ್ರೀಸಾಮಾನ್ಯನ ಸಾಲವನ್ನು ವಿಸ್ತರಿಸಲು ಧನಿಕರ ಕಣ್ಣುಗಳು ಹೊಂಚುತ್ತಿವೆ. ಅತಿ ಕ್ರೂರ ಮಾಸ ಏಪ್ರಿಲ್. ಅದು ಬರಡು ಮಣ್ಣಿನಿಂದ ಲೈಲಾಕ್ ಹೂಗಳನ್ನು ಬೆಳೆಸುತ್ತದೆ. ನೆನಪು ಮತ್ತು ಆಸೆಗಳನ್ನು ಬೆರೆಸುತ್ತದೆ. ಮರಗಟ್ಟಿದ ಬೇರುಗಳನ್ನು ವಸಂತ ಮಳೆಯಲ್ಲಿ ಕದಡುತ್ತದೆ.

ಚಳಿಗಾಲವೇ ಪರವಾಗಿಲ್ಲ, ಅದು ನಮ್ಮನ್ನು ಬೆಚ್ಚಗಿಟ್ಟಿತ್ತು. ಬಚ್ಚಿಡುವ ಹಿಮದಿಂದ ಭೂಮಿಯನ್ನು ಮುಚ್ಚಿ, ಒಣಗಿದ ಗಡ್ಡೆಗಳಿಂದ ನಮ್ಮ ಜೀವಗಳನ್ನು ಉಳಿಸಿತ್ತು ಎಂದು ಎಲಿಯಟ್ ಬರೆಯುತ್ತಾನೆ. ಕಳೆದು ಹೋದ ಚಳಿಗಾಲದ ಬಗ್ಗೆ ಅವನಿಗೆ ವ್ಯಾಮೋಹವೂ ಇಲ್ಲ, ಬಂದಿರುವ ಏಪ್ರಿಲ್ ಬಗ್ಗೆ ಬೇಸರವೂ ಇಲ್ಲ. ಆದರೆ ಮನುಷ್ಯನ ಒಳಜಗತ್ತನ್ನು ಯಾತನಾಮಯಗೊಳಿಸಿರುವ ಈ ದುರ್ಭರ ದಿನಗಳಿಂದಲೇ ಹೊಸ ಹುಟ್ಟು ಮೂಡಿಬರುವ ಸಾಧ್ಯತೆ ಅವನ ಕಾವ್ಯವನ್ನು ಆವರಿಸಿದೆ.

ಎಲಿಯಟ್‌ನ ಮಾತುಗಳಿಗೆ ಕನ್ನಡದಲ್ಲಿ ಸ್ವಲ್ಪ ಸಾಮ್ಯದ ಮಾತುಗಳನ್ನು ಬರೆದವರು ಕೆ.ಎಸ್ ನರಸಿಂಹಸ್ವಾಮಿಯವರೇ ಇರಬೇಕು. ಬತ್ತಿದ ಹೊಳೆ; ಅದರಾಚೆಗೆ ತಿರುಗುತ್ತಿದೆ ಗಾಣ/ ಮೇಲೆತ್ತಿದ ಚಾಟಿಯಲಿದೆ ಮುದಿಯೆತ್ತಿನ ಪ್ರಾಣ/ ನಡುಬೇಸಿಗೆ ಹಗಲಾಗಿದೆ ಬಿಸಿಲಿನ ಅಸಿಧಾರೆ/ ಇರುಳುದ್ದಕು ನೇಯುತ್ತಿದೆ ಬರಿಗನಸಿನ ಸೀರೆ ಎಂದವರು ಅವರು.

ಗಿಳಿ ಕೋಗಿಲೆ ಹಾಡಿದರೂ ತಲೆದೂಗದ ಬಾಳು, ಬಂಡೆಯ ಹಣೆಗೇರುತ್ತಿದೆ ಬಂಡಿಯ ಕೆಂಧೂಳುಭಿ ಎಂದವರೂ ಅವರೇ. ಹಾಗಂತ ಭಿಜನಜೀವನ ಸಾಗುತ್ತಿದೆ ಉರಿಬಿಸಿಲನು ತಾಳಿ ಎಂಬ ಸಮಾಧಾನವೂ ಅವರಲ್ಲುಂಟು. ಕಾಲಚಕ್ರ ಉರುಳುತಿದೆ ಎಂಬ ಸಾಂಪ್ರದಾಯಿಕ ವಿವೇಕ ಅವರನ್ನು ಕಾಪಾಡುತ್ತದೆ. ಎಲಿಯಟ್ ಮೇಲೆ ವೇದ ಉಪನಿಷತ್ತುಗಳ ಪ್ರಭಾವ ಉಂಟು. ಹೀಗಾಗಿ ಅವನು ಕವಿತೆಯನ್ನು ಕೊನೆಗೊಳಿಸಲು ಭಾರತಕ್ಕೇ ಬರುತ್ತಾನೆ. ಗಂಗೆಯ ಒಡಲು ಒಣಗಿದೆ, ಒಣಗಿದ ಎಲೆಗಳು ಮಳೆಗೆ ಕಾಯುತ್ತಿವೆ. ದೂರದ ಹಿಮಾಲಯ ಪರ್ವತಗಳ ಮೇಲೆ ಕಪ್ಪು ಮೋಡಗಳು ಸೇರುತ್ತಿವೆ. ಕಾಡು ಮೌನವಾಗಿ ನಿಶ್ಚಲವಾಗಿ ನಿಂತಿದೆ. ಏನನೋ ಕಾಯುತ್ತಿರುವಂತೆ ಆದಾದ ಮೇಲೆ, ಗುಡುಗೊಂದು ಕೇಳಿಸುತ್ತದೆ.

ಗುಡುಗು ಏನು ನುಡಿಯುತ್ತದೆ? ಅದು ಬೃಹದಾರಣ್ಯಕ ಉಪನಿಷತ್ತಿನಿಂದ ಎತ್ತಿಕೊಂಡ ಒಂದು ಕತೆ. ಅದು ಹೀಗಿದೆ: ಪ್ರಜಾಪತಿ ಬ್ರಹ್ಮನ ಮಕ್ಕಳಲ್ಲಿ ಮೂರು ವರ್ಗ- ಸುರರು, ಅಸುರರು ಹಾಗೂ ನರರು. ಪ್ರಜಾಪತಿಯಲ್ಲಿ ವಿದ್ಯಾರ್ಜನೆ, ಬ್ರಹ್ಮಚರ್ಯ, ವಾಸ. ಕಲಿಕೆಯ ಒಂದು ಮುಖ್ಯ ಹಂತದಲ್ಲಿ ಉಪದೇಶಕ್ಕಾಗಿ ಕೇಳಿಕೊಂಡ ಮಕ್ಕಳಿಗೆ ಪ್ರಜಾಪತಿ ಆಗಸದಲ್ಲಿ ಮೊರೆ ಮೊರೆದ ಒಂದು ಗುಡುಗನ್ನು ಕೇಳಿಸಿದ.

ಅದು ದ, ದ, ದ ಎಂಬ ಹಾಗೆ ಸದ್ದು ಮಾಡಿತು. ಅದರಿಂದಲೇ ಒಂದಕ್ಷರವನ್ನು ತೆಗೆದು ಮಕ್ಕಳಿಗೆ ಉಪದೇಶಿಸಿದ. ಅದು ದ, ನಂತರ ಅರ್ಥವಾಯಿತಾ ಎಂದು ಮಕ್ಕಳನ್ನು ಕೇಳಿದ. ಮೂವರೂ ತಮಗೆ ಅರ್ಥವಾಯಿತೆಂದರು. ಹಾಗಾದರೆ ಏನು ಅದರರ್ಥ ಎಂದು ಪ್ರಜಾಪತಿ ಮಕ್ಕಳನ್ನು ಕೇಳಿದ. ನರರು ಹೇಳಿದರು- ದ ಎಂದರೆ ದತ್ತ. ಸುರರು ಹೇಳಿದರು- ದ ಎಂದರೆ ದಮ್ಯತಾ.

ಅಸುರರು ನುಡಿದರು- ದ ಎಂದರೆ ದಯಾಧ್ವಂ. ಮೂವರೂ ಪಡೆದುದು ಒಂದೇ ಅಕ್ಷರ. ಅರ್ಥವಾದುದು ಮಾತ್ರ ಬೇರೆ ಬೇರೆ. ಪ್ರಜಾಪತಿಯು ಮೂವರ ತಿಳಿವಳಿಕೆಯೂ ಸರಿ ಎಂದ. ಅದು ಹೇಗೆ? ಮನುಷ್ಯರು ದ ಎಂದರೆ ದತ್ತ ಎಂದುಕೊಂಡರು. ಹಾಗೆಂದರೆ ದಾನ ಮಾಡಿ ಎಂದು. ಸಂಪಾದಿಸುವುದು, ಅದರ ಮೇಲೆ ಮೋಹ ಹಾಗೂ ಲೋಭ ಮನುಷ್ಯರ ಪಾಡು. ದಾನ ಮಾಡುವ ಮೂಲಕ ಲೋಭ ಮೋಹಗಳ ಜಟಿಲವನ್ನು ಮೀರಬಹುದು. ದೇವತೆಗಳು ದ ಎಂದರೆ ದಮ್ಯತ ಎಂದು ಕೊಂಡರು.



ದೇವತೆಗಳು ಭೋಗಬುದ್ಧಿಯಿಂದ ಆವೃತರಾದವರು. ಅತಿಭೋಗವೇ ವಿನಾಶದ ದಾರಿ. ಈ ಭೋಗ ಬುದ್ಧಿಯನ್ನು ದಮನ ಮಾಡುವ ವ್ರತವೇ ಅರಿವಿನ ಹೆರಿ. ಇನ್ನು ಅಸುರರಿಗೆ ದ ಎಂದರೆ ದಯಾಧ್ವಂ. ಹಾಗೆಂದರೆ ದಯೆ ತೋರಿಸಿ ಎಂದರ್ಥ. ರಾಕ್ಷಸರು ಬಲಿಷ್ಠರು. ಬಲದಿಂದಲೇ ಎಲ್ಲವನ್ನೂ ಪಡೆಯಬಹುದು ಎಂದುಕೊಂಡವರು. ಆದರೆ ಈ ಬಲ ಇನ್ನೊಬ್ಬರ ಸೊತ್ತನ್ನು ಸೆಳೆಯುವು ದಕ್ಕಲ್ಲ, ದಯೆ ತೋರಿಸುವುದಕ್ಕೆ ಎಂದು ತಿಳಿದುಕೊಂಡರು.

ಹೀಗೆ ಪ್ರಜಾಪತಿ ಅವರವರಿಗೆ ಬೇಕಾದುದನ್ನು ಅವರವರ ರೀತಿಯ ಮನದಟ್ಟು ಮಾಡಿಸಿದ. ಮನುಷ್ಯರಲ್ಲೂ ಈ ಮೂವರೂ ಇದ್ದಾರೆ. ಲೋಭಿಗಳು, ಬಲದಿಂದ ಸೊಕ್ಕಿದವರು, ಅತಿಭೋಗಿಗಳು. ನೀಡುವ, ದಯೆ ತೋರುವ, ಸಂಯಮ ಸಾಧಿಸುವುದರಿಂದ ಇವರೆಲ್ಲರೂ ತಮ್ಮ ತಮ್ಮ ಮಿತಿಗಳನ್ನು ಮೀರಬಹುದು. ಈ ಮೂರೂ ಇಲ್ಲದವರಿಂದಲೇ ಯುದ್ಧಗಳು ಉಂಟಾಗುವುದು, ಈ ಮೂರನ್ನೂ ಸಾಧಿಸುವುದರಿಂದಲೇ ವಿಶ್ವ ಶಾಂತಿ ಎಂದು ಎಲಿಯಟ್ ಮೊದಲ ಮಹಾಯುದ್ಧದ ನಂತರ ಉಧ್ವಸ್ತಗೊಂಡ ನೆಲದಲ್ಲಿ ಕುಳಿತು ಹೇಳುತ್ತಿದ್ದಾನೆ. ಈಗ ಎರಡನೇ ವಿಶ್ವಸಮರವೂ ಮುಗಿದು, ಮೂರನೆಯದು ಕಾಲಿಟ್ಟಿದೆ.

ಕೇಳುವವರ್ಯಾರು? ಎಲಿಯಟ್ ಕವಿತೆಯನ್ನು ಶಾಂತಿ: ಶಾಂತಿ: ಶಾಂತಿ: ಎಂದು ಮುಗಿಸುತ್ತಾನೆ. ಎಲ್ಲರ ಮನಸ್ಸೂ ಕಲಕಿಹೋಗಿರುವ, ಕ್ರೂರ ಏಪ್ರಿಲ್ ಮಾಸದ ಧಗೆಯಿಂದ ಚಡಪಡಿಸುತ್ತಿರುವ ದಿನಗಳಲ್ಲಿ ಎಲ್ಲರಿಗೂ ಬೇಕಾದುದು ಅದೇ. ಆದಷ್ಟು ಬೇಗನೆ ಯುದ್ಧಾತುರ ಇಳಿದು, ಸಂಯಮದಿಂದ ಬಾಳುವ ಗುಣ

ಧರೆಯಾಳ್ವರಿಗೆ ಬರಲಿ. ಎಲಿಯಟ್ ಇದನ್ನು ಬರೆದು ನೂರನಾಲ್ಕು ವರ್ಷಗಳಾಗಿವೆ. ಆದರೆ ಅದರ ಸಂದೇಶ ಜೀವಂತವಾಗಿದೆ. ಮನುಷ್ಯ ನಿಧಾನವಾಗಿ ವಿಕಾಸ ಹೊಂದಿದ್ದಾನೆ ಎಂಬ ಮಾತನ್ನೇ ಕತ್ತರಿಸಿ ಜಿಡ್ಡು ಕೃಷ್ಣಮೂರ್ತಿಯವರು ನಿಜಕ್ಕೂ ವಿಕಾಸ ಹೊಂದಿದ್ದಾನೇನು? ಸಹಸ್ರಮಾನಗಳ ಹಿಂದಿನ ಆದಿಮಾನವನ ಪ್ರವೃತ್ತಿಗಳು ಇಂದಿಗೂ ಅವನಲ್ಲಿ ಇಲ್ಲವೆ? ಎಂದು ಪ್ರಶ್ನಿಸುತ್ತಾರೆ. ನರಮಾನವ ವಿಕಾಸ ಹೊಂದಿಲ್ಲ ಎಂದು ಇಂಥ ಯುದ್ಧಗಳೂ, ಹೊಂದಿದ್ದಾನೆ ಎಂದು ಇಂಥ ಕವಿತೆಗಳೂ ರುಜುವಾತು ಮಾಡುತ್ತವೆ.



- **ಹರೀಶ್** ಕೇರ

ಅಗ್ನಿರಹಿತ ಆಹಾರ ತಯಾರಿ

ಆಹಾರ ತಯಾರಿಸುವುದು ಎಂದಾಗೆಲ್ಲ ಬೆಂಕಿಯಲ್ಲಿ ಬೇಯಿಸಿ ಆಹಾರ ತಯಾರಿಸುವುದು ತಟ್ಟನೆ ನೆನಪಾಗುತ್ತದೆ. ಆದರೆ, ಬೆಂಕಿಯಿಲ್ಲದೆ ಆಹಾರ ತಯಾರಿಸುವುದರ ಬಗ್ಗೆ ನಮಗೆಲ್ಲರಿಗೂ ಗೊತ್ತಿದೆ, ಅಲ್ಲವೇ? ಯಾಕೆಂದರೆ, ಅವಲಕ್ಕಿ, ಸಲಾಡ್, ತಂಬುಳಿಗಳು, ಮೊಸರವಲಕ್ಕಿ, ಮೊಸರು ಸಲಾಡ್, ಹಣ್ಣಿನ ರಸಗಳು, ಪಾನಕಗಳು ಇವನ್ನೆಲ್ಲ ನಾವು ಚಪ್ಪರಿಸಿ ತಿಂದಿದ್ದೇವೆ. ಮಕ್ಕಳಿಗೆ ಬಾಲ್ಯದಲ್ಲಿಯೇ ಇವನ್ನು ತಯಾರಿಸುವುದನ್ನು ಕಲಿಸಿದರೆ, ಅವರ ಜೀವನದುದ್ದಕ್ಕೂ ಇದು ಸಹಾಯಕ್ಕೆ ಬರುತ್ತದೆ. ಈಗಿನಂತೆ (ಫೆಬ್ರವರಿ 2026ರಿಂದ) ಅಡುಗೆ-ಅನಿಲ ಮತ್ತು ಕಚ್ಚಾ ತೈಲದ ಸರಬರಾಜಿಗೆ ಯುದ್ಧದಿಂದಾಗಿ ತೊಂದರೆ ಆದಾಗ, ಅಡುಗೆ ಅನಿಲದ ಕೊರತೆ ಉಂಟಾದರೆ ನಾವೆಲ್ಲರೂ ಅಡುಗೆ-ಅನಿಲದ ಬಳಕೆ ಕಡಿಮೆ ಮಾಡಲೇ ಬೇಕಾಗುತ್ತದೆ. ಆಗಂತೂ ಅಗ್ನಿರಹಿತ ಆಹಾರ ತಯಾರಿಯ ಜ್ಞಾನ ವರವಾಗುತ್ತದೆ, ಅಲ್ಲವೇ? (ಹೆಣ್ಣು-ಮಕ್ಕಳಿಗೂ, ಗಂಡು-ಮಕ್ಕಳಿಗೂ) ಪ್ರಕೃತಿದತ್ತವಾದ ಮತ್ತು ತಾಜಾ ಹಣ್ಣು-ತರಕಾರಿ, ಮೊಸರು, ಮಜ್ಜಿಗೆ ಇತ್ಯಾದಿಗಳಿಂದ ಬೆಂಕಿಯ ಸಹಾಯವಿಲ್ಲದೆ ತಯಾರಿಸಿದ ಇವು ನಮ್ಮ ಆರೋಗ್ಯಕ್ಕೂ ಉತ್ತಮ. ಇಂತಹ ಕೆಲವು ಅಗ್ನಿರಹಿತ ಆಹಾರದ ತಯಾರಿ ವಿಧಾನ ತಿಳಿದುಕೊಳ್ಳೋಣ.

> ಅಡುಗೆ ಅನಿಲದ ಕೊರತೆ ಉಂಟಾದರೆ ನಾವೆಲ್ಲರೂ ಅಡುಗೆ-ಅನಿಲದ ಬಳಕೆ ಕಡಿಮೆ ಮಾಡಲೇ ಬೇಕಾಗುತ್ತದೆ. ಆಗಂತೂ ಅಗ್ನಿರಹಿತ ಆಹಾರ ತಯಾರಿಯ ಜ್ಞಾನ ವರವಾಗುತ್ತದೆ, ಅಲ್ಲವೇ? (ಹೆಣ್ಣು-ಮಕ್ಕಳಿಗೂ, ಗಂಡು-ಮಕ್ಕಳಿಗೂ) ಪ್ರಕೃತಿದತ್ತವಾದ ಮತ್ತು ತಾಜಾ ಹಣ್ಣು-ತರಕಾರಿ, ಮೊಸರು, ಮಜ್ಜಿಗೆ ಇತ್ಯಾದಿಗಳಿಂದ ಬೆಂಕಿಯ ಸಹಾಯವಿಲ್ಲದೆ ತಯಾರಿಸಿದ ಇವು ನಮ್ಮ ಆರೋಗ್ಯಕ್ಕೂ ಉತ್ತಮ.

ಅ)ಮೊಸರು ಅವಲಕ್ಕಿ: ಅವಲಕ್ಕಿಯಲ್ಲಿ ಎರಡು ವಿಧ: ಗಟ್ಟಿ-ಅವಲಕ್ಕಿ ಮತ್ತು ತೆಳು-ಅವಲಕ್ಕಿ. ಮೊಸರವಲಕ್ಕಿ ಮಾಡಲು ಗಟ್ಟಿ ಅವಲಕ್ಕಿ ಸೂಕ್ತ. ಇದನ್ನು ನೀರಿನಲ್ಲಿ ತೊಳೆದು, ಸುಮಾರು 10-15 ನಿಮಿಷ ಅಂದರೆ ಅದು ಮೆತ್ತಗಾಗುವ ವರೆಗೆ ನೀರಿನಲ್ಲಿ ನೆನಸಿಡಬೇಕು. ಇದಕ್ಕೆ ಗಟ್ಟಿ ಮೊಸರು, ರುಚಿಗೆ ತಕ್ಕಷ್ಟು ಉಪ್ಪು, ಹಸಿಶುಂಠಿ ತುಂಡುಗಳು ಮತ್ತು ಹಸಿ ಮೆಣಸಿನಕಾಯಿ ಸೇರಿಸಬೇಕು. ಇವನ್ನೆಲ್ಲ ಚೆನ್ನಾಗಿ ಬೆರೆಸಿದರೆ, ರುಚಿಯಾದ ಮೊಸರವಲಕ್ಕಿ ತಯಾರು.

ಆ)ಅವಲಕ್ಕಿ: ಇದಂತೂ ಭಾರತದ ಹಲವೆಡೆಗಳಲ್ಲಿ ಜನಪ್ರಿಯ ಆಹಾರ. ಹಿಂದಿಯಲ್ಲಿ ಅವಲಕ್ಕಿಗೆ ಪೋಹಾ ಎನ್ನುತ್ತಾರೆ. ಇದರ ತಯಾರಿ ಬಹಳ ಸುಲಭ. ಒಂದು ದುಂಡಗಿನ ಪಾತ್ರೆಯಲ್ಲಿ ಸಾಕಷ್ಟು ತೆಳು-ಅವಲಕ್ಕಿ ಹಾಕಿ. (ಎಲ್ಲವನ್ನೂ ಚೆನ್ನಾಗಿ ಕೈಯಿಂದ ಬೆರೆಸಲು ದುಂಡಗಿನ ಪಾತ್ರೆ ಅನುಕೂಲ.) ಇದಕ್ಕೆ ತುರಿದ ತೆಂಗಿನಕಾಯಿ ಹಾಕಿ, ಕೈಯಿಂದ ಚೆನ್ನಾಗಿ ನುರಿಯಬೇಕು. ಆಗ ತೆಂಗಿನಕಾಯಿಯ ಹಾಲಿನಂಶದೊಂದಿಗೆ ತೆಳು-ಅವಲಕ್ಕಿ ಬೆರೆತು ಮೆತ್ತಗಾಗುತ್ತದೆ. ನಂತರ ಈರುಳ್ಳಿ ತುಂಡುಗಳು, ಹಸಿಶುಂಠಿ ತುಂಡುಗಳು, ಅರ್ಧ-ತುಂಡು ನಿಂಬೆಹಣ್ಣಿನ ರಸ, ರುಚಿಗೆ ತಕ್ಕಷ್ಟು ಉಪ್ಪು - ಇವನ್ನು ಹಾಕಿ, ಚೆನ್ನಾಗಿ ಬೆರೆಸಬೇಕು. ಈಗ ರುಚಿರುಚಿಯಾದ ಅವಲಕ್ಕಿ ತಿನ್ನಲು ತಯಾರು.

ಇ)ಮೊಳಕೆ ಕಾಳು, ತರಕಾರಿ ಚೂರುಗಳ ಮಿಶ್ರಣ: ಮೊಳಕೆ ಬರಿಸಿದ ಹೆಸರು ಕಾಳು ಅಥವಾ ನಿಮ್ಮ ಆಯ್ಕೆಯ ಬೇರೆ ಮೊಳಕೆ ಕಾಳುಗಳನ್ನು ಒಂದು ದುಂಡಗಿನ ಪಾತ್ರೆಯಲ್ಲಿ ಹಾಕಬೇಕು. ಇದಕ್ಕೆ ಎರಡು ಟೊಮೆಟೊ, ಎರಡು ಕ್ಯಾರೆಟ್ ಮತ್ತು ಒಂದು ಸೌತೆಕಾಯಿ ತುಂಡುತುಂಡು ಮಾಡಿ ಸೇರಿಸಬೇಕು (ಕ್ಯಾರೆಟ್ ತುರಿದು ಹಾಕಬಹುದು) ನಂತರ, ರುಚಿಗೆ ತಕ್ಕಷ್ಟು ಉಪ್ಪು, ಅರ್ಧ-ತುಂಡು ನಿಂಬೆಹಣ್ಣಿನ ರಸ ಮತ್ತು ಎರಡು ಚಿಟಿಕೆ ಜೀರಿಗೆ ಪುಡಿ ಬೆರೆಸಬೇಕು. ಒಂದು ಮುಷ್ಟಿ ದಾಳಿಂಬೆ ಹಣ್ಣಿನ ಕಾಳುಗಳನ್ನು ಸೇರಿಸಿದರೆ ಇನ್ನೂ ಚೆನ್ನ. ಇವನ್ನೆಲ್ಲ ಚೆನ್ನಾಗಿ ಬೆರೆಸಿದರೆ ತಾಜಾ ಆಹಾರ ತಯಾರು. ನಿಮ್ಮ ಅಜ್ಜಿ ಅಥವಾ ಹಿರಿಯರ ಜೊತೆ ಕುಳಿತು ಕೇಳಿದರೆ ಸುಮಾರು 50 - 60 ಇಂತಹ ಅಗ್ನಿರಹಿತ ಆಹಾರ ತಯಾರಿಸುವ ವಿಧಾನವನ್ನು ಖಂಡಿತವಾಗಿ ತಿಳಿಸುತ್ತಾರೆ. ಅವನ್ನು ಒಂದು ಟಿಪ್ಪಣಿ-ಪುಸ್ತಕದಲ್ಲಿ (ನೋಟ್-ಬುಕ್) ಬರೆದಿಟ್ಟುಕೊಳ್ಳಿ. ಮಂಗಳೂರಿನ ಸಾವಯವ ಕೃಷಿಕ ಗ್ರಾಹಕ ಬಳಗ (ರಿ.) 2026ರ ಆರಂಭದಲ್ಲಿ ಶಾಲಾ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಅಗ್ನಿರಹಿತ ಆಹಾರ ತಯಾರಿ ಸ್ಪರ್ಧೆ ಇಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು 20 ವಿವಿಧ ಅಗ್ನಿರಹಿತ ಆಹಾರಗಳನ್ನು ತಯಾರಿಸಿದ್ದರು. ಆದ್ದರಿಂದ, ಎಲ್ಲ ವಿದ್ಯಾರ್ಥಿಗಳು ಇವುಗಳ ತಯಾರಿ ವಿಧಾನವನ್ನು ಈ ಬೇಸಗೆ ರಜೆಯಲ್ಲಿ ಸುಲಭವಾಗಿ ಕಲಿಯಬಹುದು. 25 ಅಗ್ನಿರಹಿತ ಆಹಾರಗಳ ಪಟ್ಟಿ:

(1 - 5) ಹಣ್ಣುಗಳ ಸಲಾಡ್, ಬಾಳೆಹಣ್ಣು-ಜೇನುತುಪ್ಪ ಮಿಶ್ರಣ, ಟೊಮೆಟೊ-ಸೌತೆಕಾಯಿ ಸಲಾಡ್, ತುರಿದ ತೆಂಗಿನಕಾಯಿ-ಬೆಲ್ಲ ಮಿಶ್ರಣ, ಮೊಳಕೆ ಕಡಲೆ-ಸೌತೆಕಾಯಿ ಸಲಾಡ್, (6 - 10) ಶೇಂಗಾ-ಬೆಲ್ಲ ಮಿಶ್ರಣ, ಟೊಮೆಟೊ-ಈರುಳ್ಳಿ ಸಲಾಡ್, ಒಣ-ಹಣ್ಣುಗಳ ಲಾಡು (ಒಣ-ದ್ರಾಕ್ಷಿ, ಖರ್ಜೂರ, ಗೇರುಬೀಜ ಇತ್ಯಾದಿ), ಶೇಂಗಾ-ಸೌತೆಕಾಯಿ ಸಲಾಡ್, ಕ್ಯಾರೆಟ್-ಕೊತ್ತಂಬರಿ ಸಲಾಡ್, (11 - 15) ಸೇಬು-ಬಾಳೆಹಣ್ಣು ಸಲಾಡ್, ಪಪ್ಪಾಯಿ-ಕಲ್ಲಂಗಡಿ ಸಲಾಡ್, ಮೊಳಕೆ ಹೆಸರುಕಾಳು-ಹಣ್ಣುಗಳ ಸಲಾಡ್, ಕ್ಯಾರೆಟ್-ಬೀಟ್ರೂಟ್ ತುಂಡುಗಳ ಸಲಾಡ್, ಬಾಳೆಹಣ್ಣು-ಅನಾನಸ್-ಪಪ್ಪಾಯಿ ಸಲಾಡ್, (16 - 20) ನೆನಸಿದ ಓಟ್ಸ್-ಮೊಸರು, ಮೊಳಕೆ ಮಟಕಿ ಸಲಾಡ್, ಗೇರುಬೀಜ - ನೆನಸಿದ ಬಾದಾಮಿ - ನೆನಸಿದ ನೆಲಗಡಲೆ ಮಿಶ್ರಣ, ಆಲೂಗಡ್ಡೆ-ಶೇಂಗಾ ಸಲಾಡ್, ಕರಬೂಜ ಹಣ್ಣಿನ ಸಲಾಡ್, (21 - 25) ಬೇಲ್-ಪುರಿ, ಮೊಸರು (ದಹಿ) ಪುರಿ, ಸೇವ್-ಪುರಿ, ಮಜ್ಜಿಗೆ (ವಿವಿಧ ರುಚಿಗಾಗಿ ಕೊತ್ತಂಬರಿ ಸೊಪ್ಪು, ಪುದೀನಾ ಸೊಪ್ಪು ಇತ್ಯಾದಿ ಬೆರಸಬೇಕು.), ವಿವಿಧ ಪಾನಕಗಳು (ಲಿಂಬೆ ಇತ್ಯಾದಿ)

- **ಅಡ್ಡೂರು** ಕೃಷ್ಣ ರಾವ್

ಹಣವೆಂಬ ಸಾದನ

ಬದುಕು ಅನಿವಾರ್ಯವಲ್ಲ.. ಅವಕಾಶ. ದೇವರು ಕೊಟ್ಟ ವರ. ಆ ಜನ್ಮ ಈ ಜನ್ಮ ಎಂಬುದನ್ನು ನಂಬುವುದಾದರೆ ಹಿಂದಿನ ಜನ್ಮದಲ್ಲಿ ನಾವೇನು ಆಗಿದ್ದೆವು? ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ, ಮುಂದಿನ ಜನ್ಮದಲ್ಲಿ ನಾವೇನು ಆಗಿರುತ್ತೇವೆ? ಎಂಬುದಕ್ಕೆ ದಾಖಲೆಗಳಿಲ್ಲ . ಸದ್ಯ ಈ ಜನ್ಮದಲ್ಲಿ ನಾವು ಮನುಷ್ಯರಾಗಿ ಹುಟ್ಟಿದ್ದೇವೆ. ಈ ಹುಟ್ಟು ನಿಜ ಅರ್ಥದಲ್ಲಿ ಒಂದು ವರವೇ ಸರಿ.

ಬದುಕು ಎಂಬುದು ಕೆಲವರಿಗೆ ಅನಿವಾರ್ಯವಾಗುತ್ತದೆ. ಏಕೆ ಹೀಗೆ ಎಂಬುದನ್ನು ಸ್ವಲ್ಪ ವಿಚಾರ ಮಾಡೋಣ. ಹುಟ್ಟಿದ ನಂತರ ಹಸಿವು, ನೀರಡಿಕೆ, ವಸತಿ, ಭೋಗ ಇತ್ಯಾದಿಗಳು ಅನಿವಾರ್ಯ. ಇವೆಲ್ಲವುಗಳನ್ನು ದೇಹಕ್ಕೆ, ಮನಸ್ಸಿಗೆ ಒದಗಿಸಲೇಬೇಕು. ಅದಕ್ಕೆಂದೇ ಹಲವಾರು ಸಾದನಗಳಿವೆ. ಅವುಗಳಲ್ಲಿ ಹಣವೂ ಒಂದು ಸಾದನ. ಈ ಸಾದನಗಳನ್ನು ಬಳಸಿ ಬದುಕನ್ನು ಸುಂದರವಾಗಿಸಿಕೊಳ್ಳುವುದು ನಮ್ಮ ಗುರಿ ಆಗಿರಬೇಕೇ ಹೊರತು ಹಣಗಳಿಸುವುದೊಂದೇ ಗುರಿಯಾಗಬಾರದು. ಹಣದ ಗಳಿಕೆಯೇ ಗುರಿ ಎಂದುಕೊಂಡಾಗ ಬದುಕು ಅನಿವಾರ್ಯವೆಂದು ಅನಿಸುವುದರಲ್ಲಿ ಸಂಶಯವಿಲ್ಲ. ಬಲವಂತವಾಗಿ ಬದುಕುವ ಅನಿವಾರ್ಯತೆಗಳನ್ನು ನಾವಾಗಿ ನಾವೇ ಹುಟ್ಟು ಹಾಕಿಕೊಳ್ಳುತ್ತೇವೆ.

ಹಣದ ಹಿಂದೆ ಓಡುವ ಬದುಕು ಬದುಕೇ? ಆದರೆ ಹಣವಿಲ್ಲದೆ ಬದುಕುವುದು ಇಂದಿನ ಯುಗದಲ್ಲಿ ಸಾಧ್ಯವೇ..? ಕೆಲವೊಮ್ಮೆ ಸಾಧ್ಯ ಅನಿಸಿದರೂ ನಾವು ಅಂದುಕೊಂಡಂತೆ ಬದುಕುವುದು ತುಂಬಾ ಕಷ್ಟ. ಅಂದುಕೊಂಡಂತೆ ಬದುಕಲು ಹಣದ ಹಿಂದೆ ಬಿದ್ದಾಗ ಹಣ ಗಳಿಸುವುದೇ ಬದುಕಾಗುತ್ತದೆ. ಹಾಗಾದರೆ ಯಾವುದು ಮುಖ್ಯ .. ? ಹಣ ಗಳಿಸುವುದೇ ಅಥವಾ ಬದುಕುವುದೇ..? ಜೀವನದ ಹಲವು ಸಂದರ್ಭಗಳು, ಸನ್ನಿವೇಶಗಳಲ್ಲಿ ಬಹುತೇಕ ಬದುಕೇ ಮುಖ್ಯವಾಗುತ್ತದೆ. ಈ ಬದುಕು ಅತಿ ಅಮೂಲ್ಯ.

ಹಣ ಇಲ್ಲದಿದ್ದರೆ ಬದುಕಬಹುದು. ಆದರೆ ಬದುಕೇ ಇಲ್ಲದಿದ್ದರೆ..? ಎಷ್ಟೋ ಜನರು ಹಣದ ಹಿಂದೆ ಬಿದ್ದು ಸುಂದರ ಬದುಕನ್ನೇ ಮರೆತಿದ್ದಾರೆ. ಬದುಕು ಅಮೂಲ್ಯ ಎಂದಾದರೆ ಅದನ್ನು ಕಣ್ಣಿನ ರೆಪ್ಪೆಯಂತೆ ಕಾಪಾಡಿಕೊಳ್ಳಬೇಕು ಅಲ್ಲವೇ. ಮೊದಲು ಬದುಕಿ, ಆಮೇಲೆ ಬದುಕಿಗೆ ಬೇಕಾದ ಹಲವು ಸಾದನಗಳನ್ನು ಹುಡುಕಿ. ಬದುಕಿನ ಪ್ರತಿ ಕ್ಷಣಗಳನ್ನು ಸುಂದರವಾಗಿಸಿ. ಸುಖ ನೆಮ್ಮದಿಗಳನ್ನು ಆನಂದದಿಂದ ಸ್ವೀಕರಿಸಿದಂತೆ ಕಷ್ಟಗಳನ್ನು ಸ್ವೀಕರಿಸುವುದು ಅನಿವಾರ್ಯ. ಈ ಸತ್ಯವನ್ನು ಸದಾ ಕಾಲ ನೆನಪಿಟ್ಟುಕೊಳ್ಳಬೇಕು. ಹಣವೆಂಬ ಸಾದನದ ಹಿಂದೆ ಓಡುತ್ತಲೇ ಇರಬೇಡಿ. ಬದುಕಿನ ಪ್ರತಿ ಕ್ಷಣಗಳನ್ನು ಬಹುಮಾನದಂತೆ ಸ್ವೀಕರಿಸಿ.. ಆಗಲೇ ಬದುಕು ಬಂಗಾರವಾಗುವುದು.

- **ವೆಂಕಟೇಶ** ಚಾಗಿ

ತಮ್ಮದೇ ಉದ್ಯಮ ಪ್ರಾರಂಭಿಸಬೇಕು ಎಂದು ಮಕ್ಕಳು ಓದು ಬಿಟ್ಟರೆ ನೀವೇನು ಮಾಡುತ್ತೀರಿ?

- ಇಂಥದ್ದೆಲ್ಲ ವಿಷಯಗಳನ್ನು ತಿಳಿಸುವವರು ಯಾರು ಇರಲಿಲ್ಲ, ತಿಳಿದುಕೊಳ್ಳುವುದು ಸುಲಭ ಇರಲಿಲ್ಲ. ಈ ರೀತಿಯ ವಿಷಯಗಳನ್ನು ತಿಳಿದುಕೊಳ್ಳಬೇಕೆಂದರೆ ಸರಿಯಾದ ಸಮಯದಲ್ಲಿ, ಸರಿಯಾದ ಜಾಗದಲ್ಲಿ ಇದ್ದಲ್ಲಿ ಮಾತ್ರ ವಿಷಯಗಳು ತಿಳಿಯುತ್ತಿತ್ತು. ಈಗಿನ ಕಾಲದಲ್ಲಿ ಹಾಗಲ್ಲ. ಮೊಬೈಲಿನಲ್ಲಿ ಇರುವ ಎಐ ಉಪಕರಣಗಳೇ ಪ್ರತಿಯೊಂದು ವಿಷಯವನ್ನು ತಕ್ಷಣ ತಿಳಿಸಿಬಿಡುತ್ತದೆ.

ಕಾಲೇಜಿನಿಂದ ಹೊರಬಂದು ಉದ್ಯಮ ಶುರುಮಾಡಬೇಕೆಂದು ಮನಸ್ಸಿರುವ ವಿದ್ಯಾರ್ಥಿಗಳಿಗೆ, ಈಗ ಹಲವು ದಾರಿಗಳಿವೆ. ಮುಂಚೆ ಏನಾದರೂ ಹೊಸ ವಿಷಯ ತಿಳಿಯಬೇಕೆಂದರೆ, ಇಷ್ಟು ಸುಲಭದಲ್ಲಿ ಮಾಹಿತಿ ಸಿಗುತ್ತಿರಲಿಲ್ಲ. ಈಗಿನ ಕಾಲದಲ್ಲಿ ಯಾರಾದರೂ ಓದುವುದನ್ನು ಮುಂದುವರಿಸಿ ಹಣ ಹಾಳು ಮಾಡಿಕೊಂಡರೆ, ಅದು ಮೂರ್ಖತನ ಎಂಬರ್ಥ ಬರುವಂತೆ ನಿಖಿಲ್ ಕಾಮತ್ ಎನ್ನುವ ಕನ್ನಡ ನಾಡಿನ ಉದ್ಯಮಿ (ಜೆರೋದಾ) ಹೇಳಿದ ಮಾತು ತುಂಬಾ ಚರ್ಚೆಗೆ ಒಳಪಟ್ಟಿತ್ತು.

ಈಗಲೂ ಬಹುಪಾಲು ಎಲ್ಲರಿಗೂ ಓದು ಅಥವಾ ಎಜುಕೇಶನ್ ಎನ್ನುವುದು ಇಲ್ಲ ಅಂದರೆ, ಮುಂದೆ ಕೆಲಸ ಸಿಗುವಲ್ಲಿ ಅಥವಾ ಅವಕಾಶಗಳು ಸಿಗುವಲ್ಲಿ ಬಹಳ ಸಮಸ್ಯೆಯಾಗುವುದು ಎನ್ನುವ ಮನಸ್ಥಿತಿ ಇರುವುದು. ಹಿಂದಿನ ದಿನಗಳಲ್ಲಿ ಕಾಲೇಜು ಬಿಟ್ಟು, ಅಂದರೆ ಕಾಲೇಜು ಡ್ರಾಪ್ ಔಟ್ ಆಗಿ ಉದ್ಯಮ ಶುರುಮಾಡುವುದು ಎಂದರೆ, ಅದು ಅತೀವ ರಿಸ್ಕ್ ಎಂಬುದೇ ಆಗಿತ್ತು. ಏಕೆಂದರೆ ಎಲ್ಲಿ ಪ್ರಾರಂಭ ಮಾಡುವುದು, ಕಂಪನಿ ಶುರುಮಾಡುವುದಾದರೂ ಎಲ್ಲಿ ಮಾಡುವುದು, ಹೇಗೆ ಮಾಡುವುದು, ಅದಕ್ಕೆ ಹಣ ಯಾರು ಕೊಡುತ್ತಾರೆ? ಇಂಥದ್ದೆಲ್ಲ ವಿಷಯಗಳನ್ನು ತಿಳಿಸುವವರು ಯಾರು ಇರಲಿಲ್ಲ, ತಿಳಿದುಕೊಳ್ಳುವುದು ಸುಲಭ ಇರಲಿಲ್ಲ.

ಈ ರೀತಿಯ ವಿಷಯಗಳನ್ನು ತಿಳಿದುಕೊಳ್ಳಬೇಕೆಂದರೆ ಸರಿಯಾದ ಸಮಯದಲ್ಲಿ, ಸರಿಯಾದ ಜಾಗದಲ್ಲಿ ಇದ್ದಲ್ಲಿ ಮಾತ್ರ ವಿಷಯಗಳು ತಿಳಿಯುತ್ತಿತ್ತು. ಈಗಿನ ಕಾಲದಲ್ಲಿ ಹಾಗಲ್ಲ, ಮೊಬೈಲಿನಲ್ಲಿ ಇರುವ ಎಐ ಉಪಕರಣಗಳೇ ಪ್ರತಿಯೊಂದು ವಿಷಯವನ್ನು ತಕ್ಷಣ ತಿಳಿಸಿಬಿಡುತ್ತದೆ. ಮನೆಯಲ್ಲಿ ಕುಳಿತುಕೊಂಡು ಎಲ್ಲಿ ಹೋದರೆ ಏನು ಕೆಲಸ ಆಗುತ್ತದೆ, ಅದಕ್ಕೆ ಎಷ್ಟು ಹಣ ತಗಲುತ್ತದೆ, ಪ್ರೊಸೀಜರ್ ಏನು, ಇದೆಲ್ಲವನ್ನು ತಿಳಿದುಕೊಂಡು ಬಿಡಬಹುದು.

ಇರಲಿ, ಸಂಪದ ಓದುವವರಲ್ಲಿ ಪೋಷಕರು ಬಹಳಷ್ಟು ಮಂದಿ ಇದ್ದಾರೆ - ಅವರಿಗೆ ನನ್ನ ಪ್ರಶ್ನೆ:

ಇಂದಿನ ದಿನದಲ್ಲಿ ನಿಮ್ಮ ಮಕ್ಕಳು ಓದು ನಿಲ್ಲಿಸಿ ಉದ್ಯಮವೊಂದನ್ನು ಪ್ರಾರಂಭಿಸಬೇಕೆಂದು ಆಸಕ್ತಿ ತೋರಿಸಿದರೆ ನೀವು ಅದಕ್ಕೆ ಒಪ್ಪಿಗೆ ಕೊಡುತ್ತೀರ?

- **ಹರಿ** ಪ್ರಸಾದ್

> » ಕುಂಬಾರನು ಅತ್ಯಂತ ಧ್ಯಾನಸ್ಥ ಸ್ಥಿತಿಯಲ್ಲಿ ಮಣ್ಣಿಗೆ ಆಕಾರ ನೀಡುವಾಗ ಆ ಕಲಾಕೃತಿಯು ಆತನ ಹೃದಯ ಮತ್ತು ಆತ್ಮದ ಭಾವನೆಗಳನ್ನು ಪ್ರತಿಫಲಿಸುತ್ತದೆ. ಮಣ್ಣು ಮಡಕೆಯಾಗುವ ಈ ಪ್ರಕ್ರಿಯೆಯಲ್ಲಿ ನಮಗೂ ಒಂದು ಜೀವನಪಾಠವಿದೆ; ಮಣ್ಣಿನಂತೆ ನಾವು ಕೂಡ ಕಾಲಕ್ಕೆ ತಕ್ಕಂತೆ ರೂಪುಗೊಳ್ಳಬಹುದು, ಬದಲಾಗಬಹುದು ಹಾಗೂ ನಮ್ಮನ್ನು ನಾವು ಮತ್ತೆ ಮತ್ತೆ ಮುರಿದು ಕಟ್ಟಿಕೊಳ್ಳುತ್ತಾ ಹೊಸ ರೂಪದಲ್ಲಿ ಕಂಗೊಳಿಸಬಹುದು.

ಮಣ್ಣು ಮೂರ್ತಿಯಾಗುವ ಮಾಯಾಜಾಲ..!

ಹೊಸ್ತನೆ ಮುತ್ತು ಮಣ್ಣಿನ ಕಲೆಯ ಅದ್ಭುತ ಜಗತ್ತು ಕುಂಬಾರಿಕೆ. ಇದು ಕೇವಲ ಒಂದು ಕಲೆಯಷ್ಟೇ ಅಲ್ಲ, ಅಪಾರ ತಾಳ್ಮೆ ಮತ್ತು ತರಬೇತಿಯನ್ನು ಬಯಸುವ ವಿಶಿಷ್ಟ ಕೌಶಲವೂ ಹೌದು. ತಿರುಗುತ್ತಿರುವ ಚಕ್ರದ ಮೇಲಿನ ಮೃದುವಾದ ಮಣ್ಣಿನ ಮುದ್ದೆ ಸೃಜನಶೀಲ ಕೈಗಳ ಸ್ಪರ್ಶಕ್ಕೆ ಸಿಕ್ಕು ವಿವಿಧ ಆಕಾರಗಳನ್ನು ಪಡೆಯುತ್ತಾ, ಅಂತಿಮವಾಗಿ ಒಂದು ಸುಂದರವಾದ ಕಲಾಕೃತಿಯಾಗಿ ರೂಪಾಂತರಗೊಳ್ಳುವ ದೃಶ್ಯ ನಮ್ಮನ್ನು ಮಂತ್ರಮುಗ್ಧರನ್ನಾಗಿಸುತ್ತೆ.

ಕುಂಬಾರನು ಅತ್ಯಂತ ಧ್ಯಾನಸ್ಥ ಸ್ಥಿತಿಯಲ್ಲಿ ಮಣ್ಣಿಗೆ ಆಕಾರ ನೀಡುವಾಗ ಆ ಕಲಾಕೃತಿಯು ಆತನ ಹೃದಯ ಮತ್ತು ಆತ್ಮದ ಭಾವನೆಗಳನ್ನು ಪ್ರತಿಫಲಿಸುತ್ತದೆ. ಮಣ್ಣು ಮಡಕೆಯಾಗುವ ಈ ಪ್ರಕ್ರಿಯೆಯಲ್ಲಿ ನಮಗೂ ಒಂದು ಜೀವನಪಾಠವಿದೆ; ಮಣ್ಣಿನಂತೆ ನಾವು ಕೂಡ ಕಾಲಕ್ಕೆ ತಕ್ಕಂತೆ ರೂಪು ಗೊಳ್ಳಬಹುದು, ಬದಲಾಗಬಹುದು ಹಾಗೂ ನಮ್ಮನ್ನು ನಾವು ಮತ್ತೆ ಮತ್ತೆ ಮುರಿದು ಕಟ್ಟಿಕೊಳ್ಳುತ್ತಾ ಹೊಸ ರೂಪದಲ್ಲಿ ಕಂಗೊಳಿಸಬಹುದು.

ಮಡಕೆಗಳು ನಾಗರಿಕತೆಯ ಮೊದಲ ಪುರಾವೆಗಳಲ್ಲಿ ಒಂದು. ನಾಗರಿಕತೆಯ ಬೆಳವಣಿಗೆಗೂ ಮಡಕೆಗೂ ಬಹಳ ಹತ್ತಿರದ ಸಂಬಂಧವಿದೆ. ಮನುಷ್ಯ ಆಹಾರವನ್ನು ಬೇಯಿಸಿ ತಿನ್ನಲು ಕಲಿತದ್ದೇ ಮಡಕೆಯಿಂದ. ಮಡಕೆಯು ಮಾನವನ ಸಂಸ್ಕೃತಿಯ ಹುಟ್ಟಿನೊಡನೆ ಬೆಳೆದು ಬಂದಿದೆ. ಇದುವರೆಗೆ ದೊರೆತಿರುವ ಎಲ್ಲಾ ನಾಗರಿಕತೆಗಳ ಸಾಕ್ಷಿಗಳಲ್ಲಿಯೂ ಮಡಕೆಯ ಪಾತ್ರ ಅಗಾಧವಾದುದು.

ಇನ್ನು ಪುರಾಣದತ್ತ ಹೊರಳಿದರೆ, ದೂರ್ವಾಸ ಮತ್ತು ಆತನ ಪರಿವಾರದ ಹಸಿವನ್ನು ನೀಗಿಸಲೂ, ತನ್ಮೂಲಕ ಅವರ ಕೃಪೆಗೆ ಪಾತ್ರರಾಗಲೂ ವನವಾಸಿಗಳಾದ ಪಾಂಡವರಿಗೆ ಸಹಕಾರಿಯಾದದ್ದು ಒಂದು ಅಗುಳನ್ನು ಉಳಿಸಿಕೊಂಡಿದ್ದ ಪುಟ್ಟ ಮಡಕೆಯೇ!

ಅಷ್ಟೇ ಅಲ್ಲದೆ, ಅಂತ್ಯೇಷ್ಟಿ ಅಥವಾ ಮರಣಾನಂತರದ ಆಚರಣೆಗಳಲ್ಲಿ, ಕೊನೆಯಲ್ಲಿ ರಂಧ್ರ ಕೊರೆದ ಮಡಕೆಯಿಂದ ನೀರು ಸುರಿಸುತ್ತಾ ಪ್ರದಕ್ಷಿಣೆ ಹಾಕುವ ಕ್ರಿಯೆಯು ಜೀವನ ಮತ್ತು ಅದರ ನಶ್ವರತೆಯನ್ನು ನೆನಪಿಸುತ್ತದೆ. ಮಣ್ಣಿನಿಂದಲೇ ಹುಟ್ಟಿ, ಮಣ್ಣಿನ ಬದುಕಿ, ಕೊನೆಗೆ ಮಣ್ಣನ್ನೇ ಸೇರುವ ಮನುಷ್ಯನಿಗೆ ಮಣ್ಣಿನ ಮಡಕೆಯ ಆಚರಣೆ, ಮಡಕೆಯ ಸಾಮೀಪ್ಯ ಅವಿನಾಭಾವವಾದುದು.

ಒಂದು ಸಲ ಮಡಕೆಯನ್ನು ಯಾರೋ ಒಬ್ಬಾತ ಕೇಳಿದನಂತೆ- ನೀನು ಎಲ್ಲಾ ಪರಿಸ್ಥಿತಿಯಲ್ಲೂ ಥಂಡಾ, ಥಂಡಾ..., ಕೂಲ, ಕೂಲ್ ಆಗೇ ಇರ್ತೀಯ ಅದು ಹೇಗೆ ಸಾಧ್ಯ...!? ಅದಕ್ಕುತ್ತರವಾಗಿ ಮಡಕೆ, ನಾನು ಹುಟ್ಟಿ ಬಂದಿದ್ದೂ ಮಣ್ಣಿಂದ... ಹೋಗಿ ಸೇರೋದೂ ಮಣ್ಣಿಗೆ...! ಈ ಸತ್ಯ ನನಗೆ ಗೊತ್ತು. ನಡುವಿನದ್ದೆಲ್ಲಾ ಲೊಳಲೊಟ್ಟೆ ಎಂದು ಮುಗುಳ್ನಗೆ ಬೀರಿತಂತೆ.

ಕುಂಬಾರಿಕೆಯನ್ನೇ ಕಾಯಕವನ್ನಾಗಿಸಿಕೊಂಡು, ಅದರಲ್ಲಿ ಭಕ್ತಿಯನ್ನು ಬೆರೆಸಿ ದೈವಿಕ ಆನಂದ ಕಂಡುಕೊಂಡ ಅನೇಕ ಶಿವಶರಣರು ನಮ್ಮ ನಡುವೆ ಬಾಳಿ ಹೋಗಿದ್ದಾರೆ. ಕಾಯಕದ ತನ್ಮಯರಾಗಿ ಶಿವನನ್ನು ಕಂಡು ಕೈಲಾಸವನ್ನೇ ಧರೆಗಿಳಿಸಿದವರು ಅವರು. ಗೃಹಸ್ಥನ ಭೌತಿಕ ಬದುಕಿನೊಡನೆ ತಪಸ್ವಿಯ ಆಧ್ಯಾತ್ಮದ ಚಿಂತನೆಯನ್ನು ಮಿಳಿತಗೊಳಿಸಿ ಮಹಾದೇವನನ್ನು ತೋರುವ ಸಾಮಾನ್ಯವೆನಿಸುವ ಮಣ್ಣಿನ ಮಡಕೆಯಲ್ಲಿ ಇನ್ನು ಅದೆಂಥಾ ಶಕ್ತಿಯಿದ್ದೀತು..! ಇನ್ನೆಂಥಾ ಜ್ಞಾನವಿದ್ದೀತು!! ನಿಜಕ್ಕೂ ಅಚ್ಚರಿಯಾಗುತ್ತದೆ.

ಹೈಸ್ಪೀಡ್ ರೈಲು: ಆದಿತ್ಯ ಸಂಕೀರ್ಣ ಉದ್ಘಾಟನೆ

ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್‌ರಿಂದ

• ಪ್ರಜೋದಯ ವರದಿ

ಬೆಂಗಳೂರು: ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಬೆಂಗಳೂರಿನ ಬಿಇಎಂಎಲ್ ತಿಪ್ಪಸಂದ್ರ ಕ್ಯಾಂಪಸ್‌ನಲ್ಲಿ ಹೈ ಸ್ಪೀಡ್ ರೈಲು ತಯಾರಿಕೆಗೆ ಮೀಸಲಾಗಿರುವ ವಿಶೇಷ ಸಂಕೀರ್ಣ ಆದಿತ್ಯ ಅನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಹೈ ಸ್ಪೀಡ್ ರೈಲು ತಂತ್ರಜ್ಞಾನವು ಅತ್ಯಂತ ಸಂಕೀರ್ಣ ಮತ್ತು ಉನ್ನತ ಮಟ್ಟದ ತಾಂತ್ರಿಕತೆಯನ್ನು ಒಳಗೊಂಡಿದೆ. ಸ್ವದೇಶಿ ಅಭಿವೃದ್ಧಿ ಭಾರತದ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಮಹತ್ವದ ಮೈಲಿಗಲ್ಲಾಗಿದೆ ಎಂದು ಹೇಳಿದರು.

ಹೊಸದಾಗಿ ಉದ್ಘಾಟಿಸಲಾದ ಆದಿತ್ಯ ಸಂಕೀರ್ಣವು ಪ್ರಸ್ತುತ ಬಿ-28 ಕೋಚ್‌ಗಳ ಅಭಿವೃದ್ಧಿಗೆ ವಿನ್ಯಾಸಗೊಳಿಸಲಾಗಿದೆ. ಇವು ಪ್ರಮುಖ ನಗರಗಳ ನಡುವಿನ ದೂರವನ್ನು ಪರಿಣಾಮಕಾರಿಯಾಗಿ ಕಡಿಮೆ ಮಾಡುವುದರ ಮೂಲಕ ಅವುಗಳನ್ನು ಒಂದೇ ವಿಸ್ತೃತ ನಗರ ವ್ಯವಸ್ಥೆಯಾಗಿ ರೂಪಿಸುವುದಕ್ಕೆ ಸಹಾಯ ಮಾಡುತ್ತವೆ ಎಂದು ಅವರು ಹೇಳಿದರು.

ಚೆನ್ನೈ ಮತ್ತು ಬೆಂಗಳೂರು ನಡುವಿನ ಪ್ರಯಾಣದ ಅವಧಿ ಕೇವಲ 73 ನಿಮಿಷಗಳಿಗೆ ಇಳಿಯುವ ಸಾಧ್ಯತೆಇದೆ. ಮುಂಬೈ-ಬೆಂಗಳೂರು ಸಂಪರ್ಕವನ್ನು ಇನ್ನಷ್ಟು ಬಲಪಡಿಸಲು ಎರಡು ಹೊಸ ಸೇವೆ ಜಾರಿಗೊಳಿಸಲಾಗುವುದು. ಹುಬ್ಬಳ್ಳಿ ಮಾರ್ಗವಾಗಿ ಎಲ್‌ಹೆಚ್‌ಬಿ ಕೋಚ್‌ಗಳನ್ನು ಒಳಗೊಂಡ ಹೊಸ ಮೇಲ್/ ಎಕ್ಸ್ ಪ್ರೆಸ್ ರೈಲು ಪ್ರಾರಂಭಿಸಲಾಗುವುದು. ವಂದೇ ಭಾರತ್ ಸ್ಲೀಪರ್ ಎಕ್ಸ್‌ಪ್ರೆಸ್ ಶೀಘ್ರದಲ್ಲೇ ಕಾರ್ಯಾಚರಣೆಗೆ ಬರಲಿದೆ ಎಂದು ಹೇಳಿದರು.

ಪ್ರಾದೇಶಿಕ ಸಂಪರ್ಕವನ್ನು ವಿಸ್ತರಿಸುವ ಉದ್ದೇಶದಿಂದ ಮಂಗಳೂರು- ಬೆಂಗಳೂರು ನಡುವಿನ ವಂದೇ ಭಾರತ್ ಸೇವೆಯನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು. ಈ ಸೇವೆಯನ್ನು ಅನುಷ್ಠಾನಗೊಳಿಸುವ ಮೊದಲು ಮಡಗಾಂವ್ ಹಾಗು ಕರ್ನಾಟಕದ ಇತರ ಕರಾವಳಿ ನಗರಗಳನ್ನು ಸಂಪರ್ಕಿಸುವ ಬಗ್ಗೆ ಪರಿಗಣಿಸಲಾಗುತ್ತಿದೆ ಎಂದು ಅವರು ಹೇಳಿದರು.

ಹಾಸನಮಂಗಳೂರು ವಿಭಾಗದಲ್ಲಿ ವಿದ್ಯುದೀಕರಣ ಪೂರ್ಣಗೊಂಡಿರುವುದು ಹಾಗು ಕಡಿದಾದ ಕರಾವಳಿ ಪ್ರದೇಶಗಳಲ್ಲಿ ಸುರಕ್ಷತೆಯನ್ನು ಹೆಚ್ಚಿಸಲು ಸ್ವಯಂ ಚಾಲಿತ ತುರ್ತು ಬ್ರೇಕಿಂಗ್ ವ್ಯವಸ್ಥೆಗಳನ್ನು ಅಳವಡಿಸಿರುವುದರಿಂದ ತಾಂತ್ರಿಕ ಅಡಚಣೆಗಳು ನಿವಾರಣೆಯಾಗಿವೆ. ಮುಂದಿನ ಪೀಳಿಗೆಯ ರೋಲಿಂಗ್ ಸ್ಟಾಕ್ ಅಭಿವೃದ್ಧಿಯಲ್ಲಿ ಅವರ ಕೊಡುಗೆ ಅಭಿವೃದ್ಧಿ ಹೊಂದಿದ ಭಾರತದ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಅವರು ಇದೇ ಸಂದರ್ಭದಲ್ಲಿ ತಿಳಿಸಿದರು.

ದೊಡ್ಡ ಮೂಲಸೌಕರ್ಯ ಅಭಿವೃದ್ಧಿಯೊಂದಿಗೆ ಪರಿಸರ ಸಂರಕ್ಷಣೆ ಮತ್ತು ಸಾರ್ವಜನಿಕ ಜಾಗೃತಿ ನಡುವಿನ ಸಮತೋಲನವನ್ನು ಕಾಪಾಡುವಲ್ಲಿ ಸರ್ಕಾರದ ಬದ್ಧತೆಯನ್ನು ಅವರು ಪುನರುಚ್ಚರಿಸಿದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಹಾಸನ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಕೆ.ಐ.ಎ.ಡಿ.ಬಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕೆಲಸಗಳನ್ನು ಹಮ್ಮಿಕೊಂಡಿರುವುದರಿಂದ ಏ.26 ರಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ಕೆ.ಐ.ಎ.ಡಿ 'ಬಿ' ವಿ.ವಿ. ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಜಯಂತಿ ಕಾಫಿ ವರ್ಕ್ಸ್, ಎಸ್. ಎಸ್ ಗ್ರಾನೈಟ್ಸ್, ಹೆಚ್.ಪಿ.ಸಿ.ಎಲ್, ಕ್ಲೆನ್ ಪ್ಯಾಕ್ಸ್, ಮತ್ತಿತರ ಕೈಗಾರಿಕಾ ಪ್ರದೇಶಗಳು, ಕೌಶಿಕ ಮಾರ್ಗದ ಪ್ರದೇಶಗಳು, ದೊಡ್ಡಬಸವನಹಳ್ಳಿ, ಕಾಚನಾಯಕನಹಳ್ಳಿ, ಸಮುದ್ರವಳ್ಳಿ, ನಾಗತಿಹಳ್ಳಿ ಮತ್ತು ಸುತ್ತಮುತ್ತಲಿನ ಗ್ರಾಮಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಕಾರ್ಯ ನಿರ್ವಾಹಕ ಇಂಜಿನಿಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

2 ಕೋಟಿ ರೂ. ವೆಚ್ಚದಲ್ಲಿ ವಿವಿಧ ಕಾಮಗಾರಿ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಪಟ್ಟಣದ ಎಪಿಎಂಸಿ ಆವರಣದಲ್ಲಿ ಭುವನೇಶ್ವರಿ ತರಕಾರಿ ವರ್ತಕರ ಸಂಘದ ಕಚೇರಿಯನ್ನು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಉದ್ಘಾಟಿಸಿದರು.

ನಂತರ ಮಾತನಾಡಿ, ಶಾಸಕರು ರೈತರ ಅನುಕೂಲಕ್ಕಾಗಿ ಸುಮಾರು ಎರಡು ಕೋಟಿ ರೂ. ವೆಚ್ಚದಲ್ಲಿ ವಿವಿಧ ಕಾಮಗಾರಿಗಳನ್ನು ಮಾಡಿದ್ದು ಇದರಿಂದ ಬಹಳಷ್ಟು ಅನುಕೂಲಕರ ಕಾರ್ಯಗಳು ನಡೆದಿವೆ. ಅದರಲ್ಲಿ ಶೌಚಾಲಯ, ಕುಡಿಯುವ ನೀರು, ವಿದ್ಯುತ್ ದೀಪ, ಕಾಂಕ್ರೀಟ್ ರಸ್ತೆ, ವ್ಯಾಪಾರಸ್ಥರಿಗೆ ಅಂಗಡಿ ಮಳಿಗೆಗಳು ಸೇರಿದಂತೆ ವಿವಿಧ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ. ಅದರಂತೆ ಇನ್ನೂ ವಿವಿಧ ಕಾಮಗಾರಿಗಳು ಇದ್ದು ಅದನ್ನು ಮುಂದಿನ ದಿನಗಳಲ್ಲಿ ಪೂರ್ಣಗೊಳಿಸಲಾಗುವುದು ಎಂದರು.

ಈ ಹಿಂದೆ ಸರ್ಕಾರ ಎಪಿಎಂಸಿ ಕಾಯ್ದೆಯನ್ನು ತಿದ್ದುಪಡಿ ಮಾಡಿ ಅದರಿಂದ ಬಹಳಷ್ಟು ತೊಂದರೆಗಳು ಉಂಟಾದವು. ಆದಕಾರಣ ಒಂದು ಕೋಟಿ 50 ಲಕ್ಷ ರೂ. ಮುಂಗಡ ಠೇವಣಿಯನ್ನು ಬ್ಯಾಂಕಿನಲ್ಲಿ ಇಟ್ಟು ಅದರಿಂದ ಬಂದಂತಹ ಬಡ್ಡಿಯ ಹಣದಲ್ಲಿ ಕಚೇರಿಯ ನಿರ್ವಹಿಸಲಾಗುತ್ತಿತ್ತು. ಆದರೆ ಇತ್ತೀಚಿಗೆ ಸರ್ಕಾರ ಎಪಿಎಂಸಿ ಕಾಯ್ದೆ ತಿದ್ದುಪಡಿ ಮಾಡಿ ಇಂತಿಷ್ಟು ತೆರಿಗೆ ಹಣವನ್ನು ಎಪಿಎಂಸಿ ಸಂಗ್ರಹಣೆಗೆ ಬಹಳಷ್ಟು ಸಹಕಾರಿಯಾಗಿದ್ದು, ಇದರಿಂದ ಎಪಿಎಂಸಿ ಆವರಣಗಳು ನಿರ್ವಹಣೆ ಮತ್ತು ಕಚೇರಿಯ ನಿರ್ವಹಣೆಗೆ ಸಹಕಾರಿಯಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆಡಳಿತ ಅಧಿಕಾರಿ ಡಾ. ವಿಜಯಲಕ್ಷ್ಮಿ ಮಾತನಾಡಿ, ಒಂದು ಕೈಯಲ್ಲಿ ಚಪ್ಪಾಳೆ ಹೊಡೆಯಲು ಸಾಧ್ಯವೇ ಇಲ್ಲ, ಹಾಗೆಯೇ ಎಲ್ಲರೂ ಸಹಕಾರ ಸಲಹೆಯಿಂದ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡಲು ಸಹಕಾರಿಯಾಗುತ್ತದೆ. ಅರ್ಥ ಸಹಕಾರದಿಂದ ಸಹಕಾರಿ ಸಂಘ- ಸಂಸ್ಥೆಗಳನ್ನು ನಡೆಸಲು ಸಹಕಾರಿಗಳ ಬಾಗಿತ್ವ ಬಹುಮುಖ್ಯವಾಗಿದೆ. ಒಗ್ಗಟ್ಟಿನಿಂದ ಎಲ್ಲಾ ಕೆಲಸ ಕಾರ್ಯಗಳು ನಡೆಯುತ್ತವೆ. ಹಾಗೆಯೇ ಇಂದು ನಿಮ್ಮೆಲ್ಲರ ಒಗ್ಗಟ್ಟಿನಿಂದ ಎಪಿಎಂಸಿ ಆವರಣದಲ್ಲಿ ತಾಯಿ ಭುವನೇಶ್ವರಿ ಮಾತೆಯ ಹೆಸರಿನಲ್ಲಿ ತರಕಾರಿ ವರ್ತಕರ ಸಂಘವನ್ನು ಸ್ಥಾಪಿಸಿದ್ದೀರಾ ಈ ಸಂಘವು ಉತ್ತಮವಾಗಿ ಬೆಳೆಯಲಿ ಯಾವುದೇ ರೀತಿಯ ಅಡೆತಡೆಗಳು ಬರದಂತೆ ಸಾಗಲಿ ಎಂದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ಸೋಮಶೇಖರ್, ತರಕಾರಿ ವರ್ತಕರ ಸಂಘದ ಕಾರ್ಯದರ್ಶಿ ದಿವಾಕರ್ ಹಾಜರಿದ್ದರು.

ಮಹಿಳಾ ಮೀಸಲಾತಿ ಜಾರಿಗೆ ಒತ್ತಾಯಿಸಿ ಸಹಿ ಸಂಗ್ರಹಣಾ ಅಭಿಯಾನ

• ಪ್ರಜೋದಯ ವರದಿ

ಬೇಲೂರು: ಮಹಿಳಾ ಮೀಸಲಾತಿಯನ್ನು 33% ತಕ್ಷಣ ಜಾರಿಗೆ ತರಬೇಕೆಂದು ಒತ್ತಾಯಿಸಿ ಬೇಲೂರಿನಲ್ಲಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಘಟಕದ ವತಿಯಿಂದ ಸಹಿ ಸಂಗ್ರಹಣಾ ಅಭಿಯಾನ ನಡೆಸಲಾಯಿತು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಮಾಜಿ ಪುರಸಭೆ ಅಧ್ಯಕ್ಷೆ ಹಾಗೂ ಹಾಲಿ ಸದಸ್ಯೆ ತೀರ್ಥಕುಮಾರಿ ವೆಂಕಟೇಶ್, ಈ ಸಹಿ ಸಂಗ್ರಹಣಾ ಅಭಿಯಾನಕ್ಕೆ ಆಗಮಿಸಿದ ಮಹಿಳಾ ಸದಸ್ಯರು, ಸ್ನೇಹಿತೆಯರು ಹಾಗೂ ಮಾಧ್ಯಮ ಪ್ರತಿನಿಧಿಗಳಿಗೆ ಸ್ವಾಗತ ಎಂದರು.

ಮಹಿಳಾ ಮೀಸಲಾತಿ ಕುರಿತು ಲೋಕಸಭೆಯಲ್ಲಿನಡೆದ ಬೆಳವಣಿಗೆಗಳನ್ನು ಉಲ್ಲೇಖಿಸಿದ ಅವರು, ಮಹಿಳಾ ಮೀಸಲಾತಿ ಹಾಗೂ ಕ್ಷೇತ್ರ ಪುನರ್ವಿಂಗಡಣೆ ಕಾಯ್ದೆಗಳನ್ನು ಒಟ್ಟಿಗೆ ತರಲಾಗಿದ್ದು, ಇದರಿಂದ ಬಿಲ್ ಪಾಸ್ ಆಗಲು ಅಡ್ಡಿಯಾಗಿದೆ. ಕಾಂಗ್ರೆಸ್ ವಿರೋಧಿಸಿದೆ ಎಂಬ ಮಾತು ತಪ್ಪು ಕಲ್ಪನೆ ಎಂದು ಸ್ಪಷ್ಟಪಡಿಸಿದರು.

2013ರಲ್ಲಿ ಡಾ. ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರದ ಅವಧಿಯಲ್ಲಿ ಈ ಬಿಲ್ ರಾಜ್ಯಸಭೆಯಲ್ಲಿ ಅಂಗೀಕಾರಗೊಂಡಿತ್ತು. ಆದರೆ ಆಗಿನ ಬಿಜೆಪಿ ಹಾಗೂ ಎನ್‌ಡಿಎ ಮಿತ್ರಪಕ್ಷಗಳ ವಿರೋಧದಿಂದ ಲೋಕಸಭೆಯಲ್ಲಿ ಪಾಸ್ ಆಗಲಿಲ್ಲ ಎಂದು ಅವರು ತಿಳಿಸಿದರು.

ಪ್ರಸ್ತುತ ಪರಿಸ್ಥಿತಿಯನ್ನು ಟೀಕಿಸಿದ ಅವರು, ಚುನಾವಣಾ ಗಿಮಿಕ್‌ಗಾಗಿ ಮಹಿಳಾ ಮೀಸಲಾತಿ ಬಿಲ್ ಅನ್ನು ಕ್ಷೇತ್ರ ಪುನರ್ವಿಂಗಡಣೆಯೊಂದಿಗೆ ತರಲಾಗುತ್ತಿದೆ. ಇದರಿಂದ ಮಹಿಳಾ ಪರ ಸರ್ಕಾರ ಎಂಬ ಭಾವನೆ ಮೂಡಿಸಲು ಯತ್ನಿಸಲಾಗುತ್ತಿದೆ ಎಂದು ಆರೋಪಿಸಿದರು.

''ಮಹಿಳಾ ಸಬಲೀಕರಣದ ಬಗ್ಗೆ ನಿಜವಾದ ಬದ್ಧತೆ ಇದ್ದರೆ, 33% ಮೀಸಲಾತಿ ಬಿಲ್ ಅನ್ನು ಪ್ರತ್ಯೇಕವಾಗಿ ಪಾಸ್ ಮಾಡಬೇಕು'' ಎಂದು ಅವರು ಒತ್ತಾಯಿಸಿದರು.

ಕ್ಷೇತ್ರ ಪುನರ್ವಿಂಗಡಣೆ ಕುರಿತು ಆತಂಕ ವ್ಯಕ್ತಪಡಿಸಿದ ಅವರು, ''ಜನಸಂಖ್ಯೆ ಆಧಾರಿತ ಪುನರ್ವಿಂಗಡಣೆ ಮಾಡಿದರೆ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗುವ ಸಾಧ್ಯತೆ ಇದೆ. ಇದು ಉತ್ತರ ಭಾರತದ ಕೆಲವು ಭಾಗಗಳಿಗೆ ಹೆಚ್ಚಿನ ಲಾಭ ನೀಡುವಂತಿದೆ ಎಂದು ಅವರು ಅಭಿಪ್ರಾಯಪಟ್ಟರು.

ಇದೇ ವೇಳೆ ಬಿಜೆಪಿ ಸರ್ಕಾರವನ್ನು ಟೀಕಿಸಿದ ಅವರು, ಕುತಂತ್ರ ಬುದ್ಧಿಯನ್ನು ಬಿಟ್ಟು ಮಹಿಳೆಯರ ಪರ ನಿಷ್ಠೆಯಿಂದ ಕೆಲಸ ಮಾಡಬೇಕು. ಮಹಿಳಾ ಮೀಸಲಾತಿ ಬಿಲ್ ಪಾಸ್ ಮಾಡುವ ಮೂಲಕ ತನ್ನ ಬದ್ಧತೆಯನ್ನು ತೋರಿಸಬೇಕು ಎಂದು ಹೇಳಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಮಹಿಳೆಯರ ಪರ ಹಲವು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ. ನಮ್ಮ ಪಕ್ಷ ಯಾವತ್ತೂ ಮಹಿಳಾ ಪರವಾಗಿದೆ'' ಎಂದು ಹೇಳಿದರು.

ನಂತರ ಮಾತನಾಡಿದ ಪುರಸಭೆ ನಾಮಿನಿ ಸದಸ್ಯೆ ಸೌಭಾಗ್ಯ ಆಂತೋಣಿ, ದೇಶದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರು ಸುಮಾರು 50% ಇದ್ದರೂ ರಾಜಕೀಯ ಕ್ಷೇತ್ರದಲ್ಲಿ ಅವರ ಪ್ರತಿನಿಧಿತ್ವ ಕೇವಲ 56% ಮಾತ್ರ ಇರುವುದನ್ನು ವಿಷಾದಿಸಿದರು.

ಜನಗಣತಿಯನ್ನು ಕಾರಣವನ್ನಾಗಿ ತೋರಿಸಿ ಮೀಸಲಾತಿಯನ್ನು ಮುಂದೂಡುವ ಅಗತ್ಯವಿಲ್ಲ ಎಂದು ಹೇಳಿದ ಅವರು, ತಕ್ಷಣವೇ 33% ಮಹಿಳಾ ಮೀಸಲಾತಿಯನ್ನು ಜಾರಿಗೆ ತರಬಹುದು ಎಂಬುದು ಕಾಂಗ್ರೆಸ್ ನಿಲುವಾಗಿದೆ ಎಂದು ತಿಳಿಸಿದರು.

ಪುರಸಭೆ ಅಧ್ಯಕ್ಷೆ ಉಷಾ ಸತೀಶ್, ಸದಸ್ಯೆ ಮೀನಾಕ್ಷಿ ವೆಂಕಟೇಶ್, ಜಮೀಲಾ ತೌಫಿಕ್, ಬಿ. ಗಿರೀಶ್, ಜ್ಯೋತಿ, ರಶ್ಮಿ ಮಂಜುನಾಥ್, ವಿಶಾಲಾಕ್ಷಿ ಸೇರಿದಂತೆ ಹಲವರು ಹಾಗೂ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ಎಂ.ಆರ್. ವೆಂಕಟೇಶ್, ರವೀಶ್ ಬಸವಾಪುರ, ದೇವು ಸೇರಿದಂತೆ ಅನೇಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಹಾಸನದ ಗೌರವಾನ್ವಿತ 4ನೇ ಅಧಿಕ ವ್ಯವಹಾರಿಕ ನ್ಯಾಯಾಧೀಶರು (ಕಿ.ವಿ.)
ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ

ಸಿ.ಮಿಸ್.ನಂ. 658/2026

ಅರ್ಜಿದಾರರು :
1. ಸ್ವಾಮಿಗೌಡ ಬಿನ್ ಲೇಟ್ ರಂಗೇಗೌಡ ಸುಮಾರು 66 ವರ್ಷ, ಕೆಂಚಟವಳ್ಳಿ ಗ್ರಾಮ, ಕಸಬಾ ಹೋಬಳಿ, ಹಾಸನ ತಾಲ್ಲೂಕು.
2. ಜಯಮ್ಮ @ ಜಯಲಕ್ಷ್ಮಮ್ಮ ಬಿನ್ ಲೇಟ್ ರಂಗೇಗೌಡ ಕೋಂ ಲೇಟ್ ದೇವರಾಜ ಎಸ್.ಟಿ. ಸುಮಾರು 67 ವರ್ಷ ಸಂಕೇನಹಳ್ಳಿ ಗ್ರಾಮ, ದೊಡ್ಡಪುರ ಅಂಚೆ, ಕಸಬಾ ಹೋಬಳಿ, ಹಾಸನ ತಾಲ್ಲೂಕು.
3. ಕೆ.ಆರ್. ನಾರಾಯಣ ಬಿನ್ ಲೇಟ್ ರಂಗೇಗೌಡ ಸುಮಾರು 64 ವರ್ಷ, #6/476, 1ನೇ ಕ್ರಾಸ್, ಚಾಮುಂಡೇಶ್ವರಿ ದೇವಸ್ಥಾನದ ಎದುರು, ಸ್ಟೂಡೆಂಟ್ ಪಿ.ಯು. ಕಾಲೇಜು ಹಿಂಭಾಗ, ವಿವೇಕನಗರ, ಹಾಸನ.
4. ರತ್ನಮ್ಮ ಕೆ.ಆರ್. ಬಿನ್ ಲೇಟ್ ರಂಗೇಗೌಡ ಕೋಂ ಚಂದ್ರೇಗೌಡ ಟಿ.ಪಿ., ಸುಮಾರು 62 ವರ್ಷ ತಟ್ಟೇಕೆರೆ ಗ್ರಾಮ, ಕಸಬಾ ಹೋ., ಹಾಸನ ತಾಲ್ಲೂಕು.
5. ಯಶೋಧ ಬಿನ್ ಲೇಟ್ ರಂಗೇಗೌಡ ಕೋಂ ತಮ್ಮೇಗೌಡ, ಸುಮಾರು 61 ವರ್ಷ ಕೊಕ್ಕನಘಟ್ಟ ಗ್ರಾಮ, ಹನುಮಂತಪುರ ಅಂಚೆ, ಕಸಬಾ ಹೋಬಳಿ, ಹಾಸನ ತಾಲ್ಲೂಕು.

ವಿರುದ್ಧ

ರೆಸ್ಪಾಂಡೆಂಟರು : ಜನನ ಮತ್ತು ಮರಣ ನೊಂದಣಾಧಿಕಾರಿಗಳು ತಹಸೀಲ್ದಾರ್, ಹಾಸನ ತಾಲ್ಲೂಕು.

: : ಪತ್ರಿಕಾ ಪ್ರಕಟಣೆ : :

ಅರ್ಜಿದಾರರುಗಳು ಈ ಮೇಲ್ಕಂಡ ಅರ್ಜಿಯನ್ನು ರೆಸ್ಪಾಂಡೆಂಟರ ವಿರುದ್ಧ ಅರ್ಜಿದಾರರುಗಳ ತಂದೆ ರಂಗೇಗೌಡ ಬಿನ್ ಗವಿಗೌಡರವರು ದಿನಾಂಕ: 13/11/2009 ರಂದು ಹಾಸನ ತಾಲ್ಲೂಕು, ಕಸಬಾ ಹೋಬಳಿ, ಕೆಂಚಟಹಳ್ಳಿ ಗ್ರಾಮದಲ್ಲಿ ಮೃತಪಟ್ಟಿರುತ್ತಾರೆಂದು ಹಾಗೂ ರೆಸ್ಪಾಂಡೆಂಟರು ತಮ್ಮ ಮರಣ ನೊಂದಣಿ ವಹಿಯಲ್ಲಿ ಮೃತರ ದಿನಾಂಕವನ್ನು ನೊಂದಣಿ ಮಾಡಿಕೊಂಡು ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿ ದಾಖಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ನಮೂದಿಸಿರುವ ಮೃತರ ವಾರಸುದಾರರು ಯಾರಾದರೂ ಇದ್ದಲ್ಲಿ ನಿಮ್ಮ ಪರ ತಕರಾರು ಸಲ್ಲಿಸಲು ಇದ್ದಲ್ಲಿ ಈ ಪತ್ರಿಕಾ ಪ್ರಕಟಣೆಯನ್ನು ನೀವುಗಳು ನ್ಯಾಯಾಲಯದಲ್ಲಿ ನೀವುಗಳಾಗಲೀ ಅಥವಾ ನಿಮ್ಮ ಪರ ವಕೀಲರಾಗಲೀ ಖುದ್ದಾಗಿ ದಿನಾಂಕ: 8/7/26 ರಂದು ಬೆಳಿಗ್ಗೆ 11.00 ಗಂಟೆಗೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಪರ ಈ ಮೇಲ್ಕಂಡ ಅರ್ಜಿಗೆ ತಕರಾರು ಇರುವುದಿಲ್ಲವೆಂದು ಅರ್ಜಿದಾರರ ಪರ ಏಕಪಕ್ಷೀಯ ಆದೇಶ ಮಾಡಲಾಗುವುದೆಂದು ಈ ಮೂಲಕ ತಿಳಿಯಪಡಿಸಿರುತ್ತದೆ.

ದಿನಾಂಕ: 23/4/2026 ನೇ ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಇದನ್ನು ಕೊಡಲಾಗಿದೆ.

ಘನ ನ್ಯಾಯಾಲಯದ ಆದೇಶದ ಮೇರೆಗೆ
ಅರ್ಜಿದಾರರುಗಳ ಪರ ವಕೀಲರು — ಶಿರಸ್ತೆದಾರ್
ಆರ್.ರಮೇಶ, ಬಿ.ಎ.ಎಲ್‌ಎಲ್‌ಬಿ., — ಹಾಸನದ ಗೌರವಾನ್ವಿತ 4ನೇ ಅಧಿಕ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಹಾಸನ.
ಸ್ಥಳ : ಹಾಸನ
ದಿನಾಂಕ: 23/04/2026

ಅಗ್ರಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲ್ಲೂಕಿಗೆ ಮೊದಲನೇ ಸ್ಥಾನವನ್ನು ಪಡೆದು 625ಕ್ಕೆ 621 ಅಂಕ ಪಡೆದ ವಿದ್ಯಾರ್ಥಿಗೆ ರಾಧಾಕೃಷ್ಣ ವಿದ್ಯಾಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು.

ಪ್ರಾಂಶುಪಾಲ ಕಾರ್ತಿಕ್ ಮಾತನಾಡಿ, ಒಳ್ಳೆಯ ವಿಷಯವನ್ನು ಹೇಳಿಕೊಟ್ಟವರು ಕೂಡ ಗುರುಗಳೇ ಅದನ್ನು ಯಾರೂ ಕೂಡ ಮರೆಯಬಾರದು. ಯಾವುದೇ ರೀತಿಯ ಒಳ್ಳೆಯ ವಿಚಾರವನ್ನು ಮಕ್ಕಳಿಗಾಗಲಿ ದೊಡ್ಡವರಿಗಾಗಲಿ ಹೇಳಿಕೊಟ್ಟವರು ಗುರುಗಳ ಸಮಾನರು ಇದನ್ನು ಪ್ರತಿಯೊಬ್ಬರೂ ಕೂಡ ತಿಳಿದುಕೊಳ್ಳಿ. ಮಕ್ಕಳಿಗೆ ಗುರು ಇರಬೇಕು ಮತ್ತು ಗುರಿ ಇರಬೇಕು ಎರಡು ಇದ್ದರೆ ಏನಾದರೂ ಸಾಧಿಸಬಹುದು ಎಂದು ಹೇಳಿದರು.

ವಿದ್ಯಾರ್ಥಿಗಳು ಗುರುಗಳು ಶಿಕ್ಷಕರು ಇವರು ಹೇಳಿಕೊಟ್ಟ ಪಾಠ ಪ್ರವಚನದಿಂದ ಇಂದು ನಮ್ಮ ಶಾಲೆಯಲ್ಲಿ 77 ವಿದ್ಯಾರ್ಥಿಗಳು 10ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು ಅವರಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ಕೂಡ ತೇರ್ಗಡೆಯಾಗಿದ್ದಾರೆ. ಅದರಲ್ಲೂ 59 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ 14 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಮೂರು ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿ ಒಂದು ವಿದ್ಯಾರ್ಥಿ ತೃತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿರುವುದು ಸಂತೋಷಕರ ವಿಚಾರವಾಗಿದೆ ಎಂದು ಹೇಳಿದರು.

ತಾಲ್ಲೂಕಿಗೆ ಅತಿ ಹೆಚ್ಚು ಅಂಕ ಪಡೆಯುವಲ್ಲಿ ನಮ್ಮ ಶಾಲಾ ವಿದ್ಯಾರ್ಥಿಯ ಮೇಲುಗೈ ಪ್ರಮುಖವಾಗಿದೆ. ವಿದ್ಯಾರ್ಥಿ ಜೀವನದಲ್ಲಿ ನಾವು ಮೊದಲು ಏನು ಮಾಡಬೇಕು ಎಂದು ತಿಳಿಯಬೇಕು. ಬೇರೆಯವರನ್ನು ನೋಡಿ ನಾವು ಕಲಿಯಬಾರದು ನಮ್ಮನ್ನು ನಾವು ಹೊರತುಕೊಂಡು ಕಲಿಯಬೇಕು ಎಂದು ತಿಳಿಸಿದರು.

ರಸ್ತೆ ಬದಿ ವ್ಯಾಪಾರ ತೆರವುಗೊಳಿಸಲು ಆಗ್ರಹ

ಏಕಾಂಗಿ ಪ್ರತಿಭಟನೆ ನಡೆಸಿದ ಖಾಸಗಿ ವೈದ್ಯ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಪಟ್ಟಣದಲ್ಲಿ ಅನೇಕ ಕಡೆ ರಸ್ತೆ ಬದಿ ವ್ಯಾಪಾರವನ್ನು ತೆರವುಗೊಳಿಸುವಂತೆ ಆಗ್ರಹಿಸಿ ಖಾಸಗಿ ಕ್ಲಿನಿಕ್ ವೈದ್ಯ ಡಾ.ಸುಬ್ರಮಣ್ಯ ಅವರು ಏಕಾಂಗಿಯಾಗಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಪುರಸಭಾ ಕಚೇರಿ ಆವರಣದಲ್ಲಿ ನಿವೃತ್ತ ಲೋಕಾಯುಕ್ತ ಎನ್. ವೆಂಕಟಾಚಲ ಮತ್ತು ಕೆಆರ್‌ಎಸ್ ಪಕ್ಷದ ರವಿಕೃಷ್ಣರೆಡ್ಡಿ ಭಾವಚಿತ್ರ ಇಟ್ಟು ಪ್ರತಿಭಟನೆ ನಡೆಸಿದರು.



ಡಾ.ಸುಬ್ರಮಣ್ಯ ಮಾತನಾಡಿ ರಸ್ತೆ ಬದಿ ವ್ಯಾಪಾರದಿಂದ ಪಾದಚಾರಿಗಳು ಮತ್ತು ವಾಹನಗಳ ಸುಗಮ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿದೆ. ಗೊತ್ತಿದ್ದು - ಗೊತ್ತಿಲ್ಲದಂತೆ ಅಧಿಕಾರಿಗಳು ವರ್ತಿಸುತ್ತಿದ್ದಾರೆ. ರಸ್ತೆ ಬದಿ ವ್ಯಾಪಾರವನ್ನು ತೆರವುಗೊಳಿಸಲು ಭಾನುವಾರದ ತನಕ ಕಾಲಾವಕಾಶ ನೀಡಲಾಗಿದೆ ಎಂದು ಪುರಸಭೆಯ ಮುಖ್ಯಾಧಿಕಾರಿ-ಗಳು ತಿಳಿಸಿದ್ದಾರೆ. ಸೋಮವಾರದಿಂದ ಭುವನೇಶ್ವರಿ ತರಕಾರಿ ಮಾರುಕಟ್ಟೆಯಲ್ಲಿ ನಿರ್ಮಿಸಿರುವ ಪ್ರಾಂಗಣದಲ್ಲಿ ವ್ಯಾಪಾರಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ತಿಳಿಸಿದ್ದಾರೆ. ಇದರಿಂದ ಬಿ.ಎಂ. ರಸ್ತೆಯಲ್ಲಿ ವಾಹನಗಳ ನಿಲುಗಡೆ ಮತ್ತು ಪಾದಚಾರಿಗಳಿಗೆ ಅನುಕೂಲವಾಗುತ್ತದೆ ಎಂದರು.

ಪಟ್ಟಣ ಪೊಲೀಸ್ ಠಾಣೆಯ ಅಧಿಕಾರಿಗಳು, ಸಂಚಾರ ಠಾಣೆಯ ಅಧಿಕಾರಿಗಳು ಕಾರ್ಯಕ್ಷಮತೆ ಹೆಚ್ಚಿಸಿಕೊಳ್ಳಬೇಕು. ಪುರಸಭೆ ವತಿಯಿಂದ ರಸ್ತೆ ಬದಿ ವ್ಯಾಪಾರ ತೆರವುಗೊಳಿಸುವ ಸಹಕಾರ ಕೆಲಸಕ್ಕೆ ಪೊಲೀಸರು ನೀಡಬೇಕು. ನಿರ್ಲಕ್ಷ್ಯ ಧೋರಣೆ ಸಲ್ಲದು ಎಂದು ಹೇಳಿದರು.

ಪ್ರಾಂಶುಪಾಲ ಕುಮಾರ್‌ಗೆ ಅಭಿನಂದನೆ

ಚನ್ನರಾಯಪಟ್ಟಣ ತಾಲ್ಲೂಕು ದಂಡಿಗನಹಳ್ಳಿ ಹೋಬಳಿಯ ಉದಯಪುರ ಸರ್ಕಾರಿ ಪದವಿ ಕಾಲೇಜಿನ ಪ್ರಾಂಶುಪಾಲರಾದ ಕುಮಾರ್ ಅವರಿಗೆ ಹಾಸನದ ಸರ್ಕಾರಿ ಗೃಹ ವಿಜ್ಞಾನ ಕಾಲೇಜಿನಲ್ಲಿ ನಡೆದ ಸಾಂಸ್ಕೃತಿಕ ಕ್ರೀಡಾ ಚಟುವಟಿಕೆಗಳ ಸಮಾರಂಭದಲ್ಲಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಸಹ ಶಿಕ್ಷಕರು, ಸಿಬ್ಬಂದಿ ವರ್ಗ ಹಾಜರಿದ್ದು ಸಂತಸ ವ್ಯಕ್ತಪಡಿಸಿದರು.

ಶಿಕ್ಷಕರ ಪರಿಶ್ರಮದಿಂದಲೇ ಉತ್ತಮ ಫಲಿತಾಂಶ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷಾ ಫಲಿತಾಂಶದಲ್ಲಿ ಶ್ರವಣಬೆಳಗೊಳ ಹೋಬಳಿ ಜಿನ್ನೇನಹಳ್ಳಿ ಗ್ರಾಮದಲ್ಲಿನ ರಚನಾ ಇಂಟರ್ ನ್ಯಾಷನಲ್ ಸ್ಕೂಲ್‌ಗೆ ಶೇ. 100 ರಷ್ಟು ಫಲಿತಾಂಶ ಬಂದಿದ್ದು, ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕಗಳಿಸಿ ಶಾಲೆಗೆ ಕೀರ್ತಿ ತಂದ ವಿದ್ಯಾರ್ಥಿಗಳನ್ನು ಶಾಲಾ ಆಡಳಿತ ಮಂಡಳಿ ಅಭಿನಂದಿಸಿತು.

2025-26ನೇ ಸಾಲಿನ 10ನೇ ತರಗತಿಯ ಫಲಿತಾಂಶದಲ್ಲಿ ಶ್ರವಣಬೆಳಗೊಳ ಹೋಬಳಿಗೆ ಪ್ರಥಮ ಸ್ಥಾನ ತಂದುಕೊಟ್ಟು ಅತಿಹೆಚ್ಚು ಅಂಕ ಗಳಿಸಿ ಶಾಲೆಗೆ ಕೀರ್ತಿ ತಂದ ವಿದ್ಯಾರ್ಥಿಗಳನ್ನು ಶಾಲೆಯಲ್ಲಿ ಅಭಿನಂದಿಸಿ ಮಾತನಾಡಿದ ಆಡಳಿತ ಮಂಡಳಿ ಕಾರ್ಯದರ್ಶಿ ಪ್ರಕಾಶ್, ಫಲಿತಾಂಶ ಉತ್ತಮವಾಗಿದೆಯಾದರೂ ನಮ್ಮ ನಿರೀಕ್ಷೆ ಹೆಚ್ಚಿನದಾಗಿತ್ತು. ಮಕ್ಕಳ ಈ ಸಾಧನೆಗೆ ಶಾಲೆಯ ಮುಖ್ಯ ಶಿಕ್ಷಕರು, ಸಹ ಶಿಕ್ಷಕರ ಶ್ರಮ ಹೆಚ್ಚಿನದಾಗಿದೆ. ಶೇ.90 ಕ್ಕಿಂತ ಹೆಚ್ಚು ಅಂಕಗಳನ್ನು 7 ಮಂದಿ, 10 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ಮತ್ತು 18 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಪಡೆದು ಕೆಲ ವಿದ್ಯಾರ್ಥಿಗಳು ದ್ವಿತೀಯ ಸ್ಥಾನಗಳಿಸಿ ಶಾಲೆಗೆ ಶೇ.100 ರಷ್ಟು ಫಲಿತಾಂಶಕ್ಕೆ ಕಾರಣವಾಗಿದೆ. ಪ್ರಸಕ್ತ ಸಾಲಿನಲ್ಲಿ ಮಕ್ಕಳು ಗಳಿಸಿದ ಅಂಕಗಳು ಮುಂದಿನ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಲಿ ಎಂದು ಆಶಿಸಿದರು.

ಸಂಸ್ಥೆಯ ಆಡಳಿತಾಧಿಕಾರಿ ಮಂಜುನಾಥ್ ಮಾತನಾಡಿ, 2025-26ನೇ ಸಾಲಿಗೆ ಶಾಲೆ ಶೇ. 100 ರಷ್ಟು ಫಲಿತಾಂಶ ಬರಲು ಎಲ್ಲ ಪೋಷಕರು, ವಿದ್ಯಾರ್ಥಿಗಳ ಶ್ರಮ ಹೆಚ್ಚಿನದಾಗಿದೆ. ನಮ್ಮ ಶಾಲೆಯ ಹೆಮ್ಮೆಯ ವಿದ್ಯಾರ್ಥಿ ಸಾಹಿತ್ಯ 613 ಅಂಕದೊಂದಿಗೆ ಶೇ.98.08 ಫಲಿತಾಂಶ ಪಡೆದು ಇಡೀ ಶ್ರವಣಬೆಳಗೊಳ ಹೋಬಳಿಗೆ ಮೊದಲಿಗಳಾಗಿದ್ದಾಳೆ. ಇನ್ನುಳಿದಂತೆ ದ್ವಿತೀಯ ಸ್ಥಾನವನ್ನು ಎಸ್.ಎಸ್. ಲಾವಣ್ಯ 607 ಅಂಕ ಪಡೆದು ಶೇ. 97.12 ಮತ್ತು ತೃತೀಯ ಸ್ಥಾನವನ್ನು ಸಿ.ಎನ್. ರಕ್ಷಿ 589 ಅಂಕಗಳೊಂದಿಗೆ ಶೇ.94.24 ಪಡೆಯುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾರೆ.

ಸಂಸ್ಥೆಯ ಆಡಳಿತ ಮಂಡಳಿ ಅಧ್ಯಕ್ಷರಾದ ಸುನೀತಾ ಪ್ರಕಾಶ್, ಆಡಳಿತಾಧಿಕಾರಿ ಮಂಜುನಾಥ್, ಶಿಕ್ಷಕರಾದ ಸೋಮಶೇಖರ್, ರಕ್ಷಿತಾ, ಸೇರಿ ಶಿಕ್ಷಕರು, ಪೋಷಕರು ಇದ್ದರು.

ಹಾಸನದ ಗೌರವಾನ್ವಿತ 4ನೇ ಅಧಿಕ ವ್ಯವಹಾರಿಕ ನ್ಯಾಯಾಧೀಶರು (ಕಿ.ವಿ.)
ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ

ಸಿ.ಮಿಸ್.ನಂ. 659/2026

ಅರ್ಜಿದಾರರು :
1. ಸ್ವಾಮಿಗೌಡ ಬಿನ್ ಲೇಟ್ ರಂಗೇಗೌಡ ಸುಮಾರು 66 ವರ್ಷ, ಕೆಂಚಟವಳ್ಳಿ ಗ್ರಾಮ, ಕಸಬಾ ಹೋಬಳಿ, ಹಾಸನ ತಾಲ್ಲೂಕು.
2. ಜಯಮ್ಮ @ ಜಯಲಕ್ಷ್ಮಮ್ಮ ಬಿನ್ ಲೇಟ್ ರಂಗೇಗೌಡ ಕೋಂ ಲೇಟ್ ದೇವರಾಜ ಎಸ್.ಟಿ. ಸುಮಾರು 67 ವರ್ಷ ಸಂಕೇನಹಳ್ಳಿ ಗ್ರಾಮ, ದೊಡ್ಡಪುರ ಅಂಚೆ, ಕಸಬಾ ಹೋಬಳಿ, ಹಾಸನ ತಾಲ್ಲೂಕು.
3. ಕೆ.ಆರ್. ನಾರಾಯಣ ಬಿನ್ ಲೇಟ್ ರಂಗೇಗೌಡ ಸುಮಾರು 64 ವರ್ಷ, #6/476, 1ನೇ ಕ್ರಾಸ್, ಚಾಮುಂಡೇಶ್ವರಿ ದೇವಸ್ಥಾನದ ಎದುರು, ಸ್ಟೂಡೆಂಟ್ ಪಿ.ಯು. ಕಾಲೇಜು ಹಿಂಭಾಗ, ವಿವೇಕನಗರ, ಹಾಸನ.
4. ರತ್ನಮ್ಮ ಕೆ.ಆರ್. ಬಿನ್ ಲೇಟ್ ರಂಗೇಗೌಡ ಕೋಂ ಚಂದ್ರೇಗೌಡ ಟಿ.ಪಿ., ಸುಮಾರು 62 ವರ್ಷ ತಟ್ಟೇಕೆರೆ ಗ್ರಾಮ, ಕಸಬಾ ಹೋ., ಹಾಸನ ತಾಲ್ಲೂಕು.
5. ಯಶೋಧ ಬಿನ್ ಲೇಟ್ ರಂಗೇಗೌಡ ಕೋಂ ತಮ್ಮೇಗೌಡ, ಸುಮಾರು 61 ವರ್ಷ ಕೊಕ್ಕನಘಟ್ಟ ಗ್ರಾಮ, ಹನುಮಂತಪುರ ಅಂಚೆ, ಕಸಬಾ ಹೋಬಳಿ, ಹಾಸನ ತಾಲ್ಲೂಕು.

ವಿರುದ್ಧ

ರೆಸ್ಪಾಂಡೆಂಟರು : ಜನನ ಮತ್ತು ಮರಣ ನೊಂದಣಾಧಿಕಾರಿಗಳು ತಹಸೀಲ್ದಾರ್, ಹಾಸನ ತಾಲ್ಲೂಕು.

: : ಪತ್ರಿಕಾ ಪ್ರಕಟಣೆ : :

ಅರ್ಜಿದಾರರುಗಳು ಈ ಮೇಲ್ಕಂಡ ಅರ್ಜಿಯನ್ನು ರೆಸ್ಪಾಂಡೆಂಟರ ವಿರುದ್ಧ ಅರ್ಜಿದಾರರುಗಳ ತಾಯಿ ರಂಗಮ್ಮ ಕೋಂ ರಂಗೇಗೌಡರವರು ದಿನಾಂಕ: 06/08/1986 ರಂದು ಹಾಸನ ತಾಲ್ಲೂಕು, ಕಸಬಾ ಹೋಬಳಿ, ಕೆಂಚಟಹಳ್ಳಿ ಗ್ರಾಮದಲ್ಲಿ ಮೃತಪಟ್ಟಿರುತ್ತಾರೆಂದು ಹಾಗೂ ರೆಸ್ಪಾಂಡೆಂಟರು ತಮ್ಮ ಮರಣ ನೊಂದಣಿ ವಹಿಯಲ್ಲಿ ಮೃತರ ದಿನಾಂಕವನ್ನು ನೊಂದಣಿ ಮಾಡಿಕೊಂಡು ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿ ದಾಖಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ನಮೂದಿಸಿರುವ ಮೃತರ ವಾರಸುದಾರರು ಯಾರಾದರೂ ಇದ್ದಲ್ಲಿ ನಿಮ್ಮ ಪರ ತಕರಾರು ಸಲ್ಲಿಸಲು ಇದ್ದಲ್ಲಿ ಈ ಪತ್ರಿಕಾ ಪ್ರಕಟಣೆಯನ್ನು ನೀವುಗಳು ನ್ಯಾಯಾಲಯದಲ್ಲಿ ನೀವುಗಳಾಗಲೀ ಅಥವಾ ನಿಮ್ಮ ಪರ ವಕೀಲರಾಗಲೀ ಖುದ್ದಾಗಿ ದಿನಾಂಕ: 8/7/26 ರಂದು ಬೆಳಿಗ್ಗೆ 11.00 ಗಂಟೆಗೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಪರ ಈ ಮೇಲ್ಕಂಡ ಅರ್ಜಿಗೆ ತಕರಾರು ಇರುವುದಿಲ್ಲವೆಂದು ಅರ್ಜಿದಾರರ ಪರ ಏಕಪಕ್ಷೀಯ ಆದೇಶ ಮಾಡಲಾಗುವುದೆಂದು ಈ ಮೂಲಕ ತಿಳಿಯಪಡಿಸಿರುತ್ತದೆ.

ದಿನಾಂಕ: 23/4/2026 ನೇ ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಇದನ್ನು ಕೊಡಲಾಗಿದೆ.

ಘನ ನ್ಯಾಯಾಲಯದ ಆದೇಶದ ಮೇರೆಗೆ
ಅರ್ಜಿದಾರರುಗಳ ಪರ ವಕೀಲರು — ಶಿರಸ್ತೆದಾರ್
ಆರ್.ರಮೇಶ, ಬಿ.ಎ.ಎಲ್‌ಎಲ್‌ಬಿ., — ಹಾಸನದ ಗೌರವಾನ್ವಿತ 4ನೇ ಅಧಿಕ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಹಾಸನ.
ಸ್ಥಳ : ಹಾಸನ
ದಿನಾಂಕ: 23/04/2026

ಅಪಘಾತದಲ್ಲಿ ಮತ್ತೊಂದು ಅಮಾಯಕ ಜೀವ ಬಲಿ | ರಸ್ತೆ ದುರಸ್ಥಿಗೊಳಿಸಲು ಆಗ್ರಹ

ರಸ್ತೆ ಗುಂಡಿಗೆ ಅರ್ಚಕ ದುರ್ಮರಣ: ಸ್ಥಳೀಯರ ಆಕ್ರೋಶ

• ಪ್ರಜೋದಯ ವರದಿ

ಬೇಲೂರು: ರಸ್ತೆ ದುರವಸ್ಥೆಯಿಂದ ಮತ್ತೊಂದು ಅಮಾಯಕ ಜೀವ ಬಲಿಯಾದ ದುರ್ಘಟನೆ ಬೇಲೂರು ತಾಲೂಕಿನ ಬಿಕ್ಕೋಡು ಹೋಬಳಿಯ ವಾಟೆಹಳ್ಳ ಸೇತುವೆ ಸಮೀಪದ ಚೆಲ್ಲೇನಹಳ್ಳಿ ಗ್ರಾಮದ ಬಳಿ ನಡೆದಿದ್ದು, ಕಡೆಗರ್ಜೆ ಗ್ರಾಮದ ನಿವಾಸಿಯಾಗಿದ್ದ 45 ವರ್ಷದ ಚಂದ್ರಶೇಖರ್ ಅವರು ಕೆರೆಕೋಡಮ್ಮ ದೇವಸ್ಥಾನದ ಅರ್ಚಕರಾಗಿ ಸೇವೆ ಸಲ್ಲಿಸುತ್ತಿದ್ದರು. ಶುಕ್ರವಾರ ರಾತ್ರಿ ಸುಮಾರು 10.30ರ ವೇಳೆಗೆ ಸಂಭವಿಸಿದ ಅಪಘಾತದಲ್ಲಿ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ರಸ್ತೆಯಲ್ಲಿ ಉಂಟಾಗಿದ್ದ ದೊಡ್ಡ ಗುಂಡಿಯನ್ನು ತಪ್ಪಿಸಲು ಎದುರಿನಿಂದ ಬರುತ್ತಿದ್ದ ಟಾಟಾ ಏಸಿ ಪಿಕ್‌ಅಪ್ ವಾಹನ ಚಾಲಕ ಬಲಗಡೆಗೆ ತಿರುಗಿದ ವೇಳೆ ಎದುರಿಗೆ ಬರುತ್ತಿದ್ದ ಚಂದ್ರಶೇಖರ್ ಅವರ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮವಾಗಿ ಅವರು

ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಬೈಕ್‌ನ ಹಿಂಬದಿಯಲ್ಲಿ ಪ್ರಯಾಣಿಸುತ್ತಿದ್ದ ಮತ್ತೊಬ್ಬರಿಗೆ ಗಂಭೀರ ಗಾಯಗಳಾಗಿದ್ದು, ಅವರನ್ನು ಹಾಸನದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಘಟನೆಗೆ ರಸ್ತೆ ದುರವಸ್ಥೆಯೇ ಮುಖ್ಯ ಕಾರಣ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಬೇಲೂರು -ಬಿಕ್ಕೋಡು ರಸ್ತೆಯ ಎರಡೂ ಬದಿಗಳಲ್ಲೂ ಆಳವಾದ ಗುಂಡಿಗಳು ನಿರ್ಮಾಣವಾಗಿದ್ದು, ತಾತ್ಕಾಲಿಕವಾಗಿ ಹಾಕಿದ ಪ್ಯಾಚ್‌ಗಳು ಸಂಪೂರ್ಣವಾಗಿ ಕಿತ್ತುಹೋಗಿವೆ ಎಂದು ತಿಳಿಸಿದ್ದಾರೆ. ಅಪಘಾತ ಸಂಭವಿಸಿದ ಪ್ರದೇಶದಲ್ಲಿ ಬೀದಿ ದೀಪಗಳು, ಎಚ್ಚರಿಕೆ ಫಲಕಗಳು ಸೇರಿದಂತೆ ಯಾವುದೇ ಸುರಕ್ಷತಾ ವ್ಯವಸ್ಥೆಗಳಿಲ್ಲದೆ, ರಾತ್ರಿ ವೇಳೆ ಸಂಚಾರ ಅಪಾಯಕಾರಿ ಆಗಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಸ್ಥಳೀಯರ ಆಕ್ರೋಶ: ಸ್ಥಳೀಯ ನಿವಾಸಿ ಜಗದೀಶ್ ಮಾತನಾಡಿ, ಇದೇ ಸ್ಥಳದಲ್ಲಿ ಇದಕ್ಕೂ ಮುನ್ನ ಅನೇಕ ಅಪಘಾತಗಳು ಸಂಭವಿಸಿರುವುದಾಗಿ ತಿಳಿಸಿದ್ದಾರೆ. ಇದು ನಮ್ಮ ಊರಿನಲ್ಲಿ ಎರಡನೇ ಸಾವು. ಇತ್ತೀಚೆಗೆ ನಮ್ಮ ಸಂಬಂಧಿಕನೊಬ್ಬ ಕೂಡ ಇದೇ ಜಾಗದಲ್ಲಿ ಗಾಯಗೊಂಡಿದ್ದಾನೆ. ಕಳಪೆ ಕಾಮಗಾರಿಯಿಂದ ರಸ್ತೆ ದಿನೇದಿನೇ ಹದಗೆಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಸ್ಥಳೀಯ ನಿವಾಸಿ ಮೇಘನಾ ಮಾತನಾಡಿ, ಚಂದ್ರಣ್ಣ ನಮ್ಮ ಊರವರೇ. ದೇವಸ್ಥಾನ ಪೂಜೆ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ಇದೇ ಸ್ಥಳದಲ್ಲಿ ಹಿಂದೆ ಕೂಡ ಅಪಘಾತಗಳು ನಡೆದಿವೆ. ಆದರೂ ಯಾರೂ ಗಮನ ಹರಿಸಿಲ್ಲ. ತಕ್ಷಣ ರಸ್ತೆ ದುರಸ್ತಿ ಮಾಡದಿದ್ದರೆ ಪ್ರತಿ ಘಟನೆಗೆ ಇಳಿಯಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಂಬಂಧಪಟ್ಟ ಇಲಾಖೆ ನಿರ್ಲಕ್ಷ್ಯವೇ ಕಾರಣ

ಘಟನೆಗೆ ಸಂಬಂಧಪಟ್ಟ ಇಲಾಖೆ ನಿರ್ಲಕ್ಷ್ಯವೇ ಕಾರಣವಾಗಿದೆ. ರಸ್ತೆಯಲ್ಲಿದ್ದ ಗುಂಡಿ ತಪ್ಪಿಸಲು ಹೋಗಿದಾಗಲೇ ಈ ಅಪಘಾತ ಸಂಭವಿಸಿದೆ. ಆ ಗುಂಡಿ ಇಲ್ಲದಿದ್ದರೆ ಒಂದು ಜೀವ ಉಳಿಯುತ್ತಿತ್ತು. ಸಣ್ಣ ಪರಿಹಾರದಿಂದ ಈ ನಷ್ಟ ಭರ್ತಿ ಆಗುವುದಿಲ್ಲ. ಮೃತರ ಮಕ್ಕಳ ಶಿಕ್ಷಣಕ್ಕೆ ಸರ್ಕಾರ ನೆರವು ನೀಡಬೇಕು.

ರಾಧ, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ.

ತಕ್ಷಣ ಕ್ರಮಕ್ಕೆ ಒತ್ತಾಯ

ಸ್ಥಳೀಯರು ವಾಟೆಹಳ್ಳ ಸೇತುವೆಯಿಂದ ಚೆಲ್ಲೇನಹಳ್ಳಿ ಕ್ರಾಸ್‌ವರೆಗೆ ರಸ್ತೆಯನ್ನು ಸಂಪೂರ್ಣವಾಗಿ ದುರಸ್ತಿ ಮಾಡಬೇಕು ಅಥವಾ ಡಾಂಬರೀಕರಣ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಅಲ್ಲದೆ, ಬೀದಿ ದೀಪಗಳು ಅಳವಡಿಸುವುದು, ಎಚ್ಚರಿಕೆ ಫಲಕಗಳನ್ನು ಸ್ಥಾಪಿಸುವುದು ಮತ್ತು ಅಪಘಾತ ತಡೆ ಕ್ರಮಗಳನ್ನು ಜಾರಿಗೆ ತರುವುದು ಅಗತ್ಯವಿದೆ ಎಂದು ಒತ್ತಾಯಿಸಿದ್ದಾರೆ.

ಘಟನೆ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಬೇಲೂರು ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಗಿದ್ದು, ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ.

ಈ ವೇಳೆ ತಾಪಂ ಮಾಜಿ ಅಧ್ಯಕ್ಷೆ ಕಮಲಾ ಚನ್ನಪ್ಪ, ಮಂಜುಳ, ಪೃಥ್ವಿರಾಜ್, ಚಾಮರಾಜ್, ದುಶ್ಯಂತ್, ಮಧು, ರುದ್ರೇಶ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಅಪ್ರಕಟಿತ ಪುಸ್ತಕ ಕುರಿತು ಅನಗತ್ಯ ಚರ್ಚೆ: ನರವಣೆ

• ಪ್ರಜೋದಯ ವರದಿ

ನವದೆಹಲಿ: ಅಪ್ರಕಟಿತ ಆತ್ಮಚರಿತ್ರೆಯಾದ ಫೋರ್ ಸ್ಟಾರ್ಸ್ ಆಫ್ ಡೆಸ್ಟಿನಿಯ ವಿಚಾರವಾಗಿ ನನ್ನನ್ನು ಅನಗತ್ಯವಾಗಿ ಎಳೆದು ತರಲಾಯಿತು ಎಂದು ಮಾಜಿ ಸೇನಾ ಮುಖ್ಯಸ್ಥ ಎಂ.ಎಂ.ನರವಣೆ ಅವರು ಹೇಳಿದ್ದಾರೆ.

ದಿ ಕ್ಯೂರಿಯಸ್ ಅಂಡ್ ದಿ ಕ್ಲಾಸಿಫೈಡ್

ಅನ್‌ಅರ್ಥಿಂಗ್ ಮಿಲಿಟರಿ ಮಿಥ್ಸ್ ಅಂಡ್ ಮಿಸ್ಟರೀಸ್ ಎಂಬ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಆ ಹಳೆಯ ಘಟನೆಯನ್ನು ಮೆಲುಕು ಹಾಕಿದ್ದಾರೆ. ನಾನು ಆ ಘಟನೆಯಿಂದ ಹೊರ ಬಂದಿದ್ದು, ಈಗಾಗಲೇ ಎರಡು ಪುಸ್ತಕಗಳನ್ನು ಬರೆದಿದ್ದೇನೆ. ಮೂರನೆಯದು ಶೀಘ್ರದಲ್ಲೇ ಬಿಡುಗಡೆಯಾಗಲಿದೆ ಎಂದು ತಿಳಿಸಿದರು.

ಈ ವರ್ಷದ ಆರಂಭದಲ್ಲಿ ನರವಣೆ ಅವರ ಅಪ್ರಕಟಿತ ಆತ್ಮಚರಿತ್ರೆಯಾದ ಫೋರ್ ಸ್ಟಾರ್ಸ್ ಆಫ್ ಡೆಸ್ಟಿನಿ ಪುಸ್ತಕದ ವಿಚಾರ ರಾಜಕೀಯ ವಲಯದಲ್ಲಿ ಭಾರೀ ವಿವಾದಕ್ಕೆ ಕಾರಣವಾಗಿತ್ತು. ಪುಸ್ತಕವನ್ನು ಪರಿಶೀಲಿಸುವವರೆಗೆ ಅದನ್ನು ತಡೆಹಿಡಿಯುವಂತೆ ರಕ್ಷಣಾ ಸಚಿವಾಲಯವು ಪ್ರಕಾಶಕರಿಗೆ ಸೂಚಿಸಿತ್ತು. ನನ್ನ ಮಟ್ಟಿಗೆ ವಿಷಯ ಅಲ್ಲಿಗೆ ಮುಗಿದಿತ್ತು. ನಾನು ಮುಂದೆ ಸಾಗಿದ್ದೆ. ಅದು ಮುಗಿದ ಅಧ್ಯಾಯ. ಆದರೆ, ಅನಗತ್ಯ ವಾಗಿ ನನ್ನನ್ನು ಉಲ್ಲೇಖಿಸುವುದು, ಪ್ರಕಟವಾಗದ ಪುಸ್ತಕದ ವಿಷಯಕ್ಕೆ ನನ್ನನ್ನು ಎಳೆದು ತಂದು ಸುದ್ದಿಯಾಗುವಂತೆ ಮಾಡಿದ್ದು ಅಗತ್ಯವಿರಲಿಲ್ಲವೆಂದು ನರವಣೆ ಸಂದರ್ಶನದಲ್ಲಿ ಹೇಳಿದ್ದಾರೆ.

ಫೆಬ್ರುವರಿಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಲೋಕಸಭೆಯಲ್ಲಿ ಈ ಆತ್ಮಚರಿತ್ರೆಯ ಆಯ್ದ ಭಾಗಗಳನ್ನು ಉಲ್ಲೇಖಿಸದಂತೆ ತಡೆಯಲಾಗಿತ್ತು. ಏಕೆಂದರೆ ಅದು ಇನ್ನೂ ಪ್ರಕಟವಾಗಿರಲಿಲ್ಲ.

ಸೇನಾ ದಂತಕಥೆಗಳ ಅನಾವರಣ

ನರವಣೆ ಅವರ ಇತ್ತೀಚಿನ ಪುಸ್ತಕವು ಗಂಭೀರ ಶೈಕ್ಷಣಿಕ ಪ್ರಯತ್ನಕ್ಕಿಂತ ಹೆಚ್ಚಾಗಿ ಮನರಂಜನಾ ಓದಿಗಾಗಿ ಸಿದ್ಧಪಡಿಸಲಾಗಿದೆ. ರೂಪಾ ಪಬ್ಲಿಕೇಷನ್ಸ್ ಹೊರತಂದಿರುವ ಈ ಪುಸ್ತಕವು ಭಾರತೀಯ ಸೇನೆ, ನೌಕಾಪಡೆ ಮತ್ತು ವಾಯುಪಡೆಗೆ ಸಂಬಂಧಿಸಿದ ಕೆಲವು ರೋಚಕ ಕಥೆಗಳು ಮತ್ತು ದಂತಕಥೆಗಳನ್ನು ಒಳಗೊಂಡಿದೆ. ಪುಸ್ತಕದಲ್ಲಿ ನರವಣೆ ಅವರು ಭಾರತೀಯ ಸಶಸ್ತ್ರ ಪಡೆಗಳಲ್ಲಿ ಬಳಕೆಯಾಗುವ ಜೈ ಹಿಂದ್ ಅಭಿ ನಂದನೆಯ ಮೂಲವನ್ನು ಸ್ವಾತಂತ್ರ್ಯ ಚಳವಳಿಯಿಂದ ಹಿಡಿದು ಸೇನೆಯಲ್ಲಿ ಅದರ ಅಳವಡಿಕೆಯವರೆಗೆ ವಿವರಿಸಿದ್ದಾರೆ. ಜೈ ಹಿಂದ್ ಮೊದಲು ಭಾರತೀಯ ವಾಯು ಪಡೆಯಲ್ಲಿ ಬಳಕೆಯಾಯಿತು. ನಂತರ ಸೇನೆ ಮತ್ತು ನೌಕಾಪಡೆಯಲ್ಲೂ ಅಳವಡಿಸಿ ಕೊಳ್ಳಲಾಯಿತು. ಹಿಂದೆ ಸೆಲ್ಯೂಟ್ ಮಾಡುವಾಗ ಯಾವುದೇ ಶಬ್ದ ಮಾಡುತ್ತಿರಲಿಲ್ಲ. ಆಯಾ ರೆಜಿಮೆಂಟ್‌ಗಳು ಸತ್ ಶ್ರೀ ಅಕಾಲ್ ಅಥವಾ ರಾಮ್ ರಾಮ್ ಎಂಬ ತಮ್ಮದೇ ಆದ ಘೋಷಣೆಗಳನ್ನು ಬಳಸುತ್ತಿದ್ದವು.

ದಾಖಲೆ ಬರೆದ ಪಂಜಾಬ್ ಕಿಂಗ್ಸ್

ಅಯ್ಯರ್, ಪ್ರಭ್‌ಸಿಮ್ರಾನ್ ಅರ್ಧ ಶತಕ: ಕೆ.ಎಲ್.ರಾಹುಲ್ ಶತಕ ವ್ಯರ್ಥ

• ಪ್ರಜೋದಯ ವರದಿ

ನವದೆಹಲಿ: ಕೆ.ಎಲ್.ರಾಹುಲ್ ಅವರ ಸ್ಫೋಟಕ ಶತಕದ ಹೊರತಾಗಿಯೂ, ಸಂಘಟಿತ ಬ್ಯಾಟಿಂಗ್ ಪ್ರದರ್ಶನ ನೀಡಿದ ಪಂಜಾಬ್ ಕಿಂಗ್ಸ್ ತಂಡವು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 6 ವಿಕೆಟ್‌ಗಳ ಭರ್ಜರಿ ಜಯ ದಾಖಲಿಸಿದೆ.

ಈ ಗೆಲುವಿನೊಂದಿಗೆ ಪಂಜಾಬ್ ತಂಡವು ಅಂಕ ಪಟ್ಟಿಯಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ.

ರಾಹುಲ್ ಶತಕದ ಆಟ

ಮೊದಲು ಬ್ಯಾಟಿಂಗ್ ಮಾಡಿದ್ದ ಡೆಲ್ಲಿ ಕ್ಯಾಪಿಟಲ್ಸ್‌ನ ಕೆ.ಎಲ್.ರಾಹುಲ್ ಅವರ ಅಮೋಘ ಶತಕದ ನೆರವಿನಿಂದ ಬೃಹತ್ ಮೊತ್ತವನ್ನು ಪೇರಿಸಿತ್ತು. ಆದರೆ, ಈ ಬೃಹತ್ ಗುರಿಯನ್ನು ಬೆನ್ನಟ್ಟಿದ ಪಂಜಾಬ್ ಕಿಂಗ್ಸ್ ಆರಂಭದಿಂದಲೇ ಆಕ್ರಮಣಕಾರಿ ಆಟಕ್ಕೆ ಮೊರೆಹೋಯಿತು.

ಪಂಜಾಬ್ ಕಿಂಗ್ಸ್ ಅಬ್ಬರದ ಚೇಸಿಂಗ್

ಕಠಿಣ ಗುರಿಯನ್ನು ಬೆನ್ನಟ್ಟಿದ ಪಂಜಾಬ್ ಕಿಂಗ್ಸ್‌ಗೆ ಆರಂಭಿಕ ಆಟಗಾರರು ಸ್ಫೋಟಕ ಆರಂಭ ನೀಡಿದರು. ಮಧ್ಯಮ ಕ್ರಮಾಂಕದಲ್ಲಿ ಅಯ್ಯರ್ ಅಬ್ಬರಿಸುವ ಮೂಲಕ ಪಂದ್ಯವನ್ನು ಪಂಜಾಬ್ ಪರವಾಗಿ ತಿರುಗಿಸಿದರು.

ಡೆಲ್ಲಿ ಬೌಲರ್‌ಗಳ ದಾಳಿಯ ನಡುವೆಯೂ ಎದೆಗುಂದದ ಪಂಜಾಬ್ ಬ್ಯಾಟರ್‌ಗಳು ಇನ್ನು 7 ಎಸೆತಗಳು ಬಾಕಿ ಇರುವಂತೆಯೇ 4 ವಿಕೆಟ್ ಕಳೆದುಕೊಂಡು ಗುರಿ ತಲುಪಿದರು.

ಬೌಲಿಂಗ್ ವಿಭಾಗದ ವೈಫಲ್ಯ

ಡೆಲ್ಲಿ ಕ್ಯಾಪಿಟಲ್ಸ್ ಬೌಲಿಂಗ್ ವಿಭಾಗವು ಪಂಜಾಬ್‌ನ ಬಿರುಸಿನ ಆಟಕ್ಕೆ ಬ್ರೇಕ್ ಹಾಕುವಲ್ಲಿ ವಿಫಲವಾಯಿತು. ವಿಶೇಷವಾಗಿ ಡೆತ್ ಓವರ್‌ಗಳಲ್ಲಿ ಹೆಚ್ಚು ರನ್ ಬಿಟ್ಟು ಕೊಟ್ಟಿದ್ದು ಡೆಲ್ಲಿಯ ಸೋಲಿಗೆ ಪ್ರಮುಖ ಕಾರಣವಾಯಿತು.ಅಮೋಘ ಬ್ಯಾಟಿಂಗ್ ಪ್ರದರ್ಶಿಸಿದ ಪಂಜಾಬ್ ಆಟಗಾರರು ಅಭಿಮಾನಿಗಳ ಮನಗೆದ್ದಿದ್ದಾರೆ.

ಪಂದ್ಯದ ಸಂಕ್ಷಿಪ್ತ ಸ್ಕೋರ್

ಡೆಲ್ಲಿ ಕ್ಯಾಪಿಟಲ್ಸ್ : 264/4 (20 ಓವರ್‌ಗಳು) ಕೆ.ಎಲ್.ರಾಹುಲ್ 152★, ನಿತೀಶ್ ರಾಣಾ 91.

ಪಂಜಾಬ್ ಕಿಂಗ್ಸ್ : 265/4 (19.1 ಓವರ್‌ಗಳು) ಅಯ್ಯರ್ 72, ಪ್ರಭ್‌ಸಿಮ್ರಾನ್ ಸಿಂಗ್ 76.

ಫಲಿತಾಂಶ: ಪಂಜಾಬ್ ಕಿಂಗ್ಸ್‌ಗೆ 6 ವಿಕೆಟ್‌ಗಳ ಜಯ.

ಜಿಲ್ಲೆಯಲ್ಲಿ 10 ಸಾವಿರ ಕುಟುಂಬಕ್ಕೆ ಇನಾಂ ಭೂಮಿಹಕ್ಕು

» ಮೊದಲನೇ ಪುಟದಿಂದ

ರದ್ದತಿ ಕಾಯ್ದೆಗಳು ಜಾರಿ ಯಾದ ನಂತರ, ಇಂತಹ ಭೂಮಿಗಳನ್ನು ಮರು ಮಂಜೂರು ಮಾಡುವ ಪ್ರಕ್ರಿಯೆ ಆರಂಭವಾದರೂ, ದಾಖಲೆಗಳ ಪರಿಶೀ ಲನೆ ಮತ್ತು ಅರ್ಹತೆಯ ಮಾನದಂಡಗಳು ಹಲವು ಅರ್ಜಿಗಳ ತಿರಸ್ಕಾರಕ್ಕೆ ಕಾರಣ ವಾಗಿವೆ.

ವಿಲೇವಾರಿಯಲ್ಲಿ ಜಿಲ್ಲೆ ಮುಂಚೂಣಿ

ಪೂರ್ವಜನರು ಪಡೆದಿರುವ ಇನಾಂ ಭೂಮಿ ಮಂಜೂ ರಾತಿಗಾಗಿ 2017 ರಿಂದಲೂ ಅರ್ಜಿ ಗಳು ಸಲ್ಲಿಕೆಯಾಗಿದ್ದು, ರಾಜ್ಯದಲ್ಲಿ ಸಾವಿರಾರು ಅರ್ಜಿಗಳು ಬಾಕಿ ಉಳಿದಿವೆ. ಅರ್ಜಿಗಳ ವಿಲೇವಾರಿಯಲ್ಲಿ ಹಾಸನ ಜಿಲ್ಲೆ ಮುಂಚೂಣಿ ಯಲ್ಲಿದೆ. ಇನಾಂ ಜಮೀನುಗಳ ಮರು ಮಂಜೂರಾತಿ ಪ್ರಕ್ರಿಯೆಯನ್ನು ವೇಗಗೊಳಿಸಲು ಸರ್ಕಾರವು 2025ರ ಏಪ್ರಿಲ್ 28ರಂದು ಸಕ್ಷಮ ಪ್ರಾಧಿಕಾರಗಳನ್ನು ಪರಿಷ್ಕರಿಸಿ ಅಧಿಸೂಚನೆ ಹೊರಡಿಸಿದೆ. ವಿವಿಧ ಇನಾಂ ರದ್ದತಿ ಕಾಯ್ದೆಗಳ ಅನ್ವಯ ಅರ್ಜಿಗಳನ್ನು ಶೀಘ್ರ ವಿಲೇವಾರಿ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿತ್ತು.

ಮರುಪರಿಶೀಲನೆಗೆ ಆಗ್ರಹ

ಜಿಲ್ಲೆಯಲ್ಲಿ ಸಲ್ಲಿಕೆಯಾಗಿದ್ದ ಒಟ್ಟು ಅರ್ಜಿಗಳಲ್ಲಿ ಅರ್ಧ ದಷ್ಟು (14,714) ಅರ್ಜಿಗಳು ತಿರಸ್ಕೃತಗೊಂಡಿರುವುದು ಸಾವಿರಾರು ಜನರ ಅಸಮಾಧಾನಕ್ಕೂ ಕಾರಣವಾಗಿದೆ. ಅರ್ಹರಿಗೆ ನ್ಯಾಯ ಒದಗಿಸಲು ಮರು ಪರಿಶೀಲನೆ ವ್ಯವಸ್ಥೆ, ದಾಖಲೆ ಸರಳೀಕರಣ ಮತ್ತು ಜನ ಜಾಗೃತಿ ಅಗತ್ಯವಾಗಿದೆ. ಇಲ್ಲವಾದರೆ ಇನಾಂ ಭೂಮಿಯ ಹಕ್ಕಿಗಾಗಿ ಹೋರಾಟ ಮುಂದುವರೆಸಲಾಗುವುದೆಂದು ಅರ್ಹ ಫಲಾನುಭವಿಗಳು ಎಚ್ಚರಿಕೆ ನೀಡಿದ್ದಾರೆ. ಜಿಲ್ಲೆಯಲ್ಲಿ ಇನಾಂ ಭೂಮಿ ಮಂಜೂ ರಾತಿ ಪ್ರಕ್ರಿಯೆ ಅಂತಿಮ ಹಂತ ತಲುಪಿದಂತಾಗಿದ್ದರೂ, ಅರ್ಜಿ ತಿರಸ್ಕೃತಗೊಂಡವರು, ಮೇಲ್ಮನವಿ ಹೋಗಿರುವುದರಿಂದ ಗೊಂದಲ ಮುಂದುವರೆದಿದೆ.

ವೀರಶೈವ ಸಮಾಜದಿಂದ ಜಾಗೃತಿ ಕಾರ್ಯಕ್ರಮ ಹೆಚ್ಚಲಿ

• ಪ್ರಜೋದಯ ವರದಿ

ಹಾಸನ: ವೀರಶೈವ ಲಿಂಗಾಯತ ಮಹಾ ವೇದಿಕೆಯೂ ಸಮಾಜದ ಅಭಿವೃದ್ಧಿ ಹಾಗು ಜನಜಾಗೃತಿ ಮೂಡಿಸುವ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡಬೇಕೆಂದು ನುಗ್ಗೇಹಳ್ಳಿ ಮಠದ ಶ್ರೀ ಮಹೇಶ್ವರ ಸ್ವಾಮೀಜಿ ಹೇಳಿದರು.

ನಗರದ ತಣ್ಣೀರುಹಳ್ಳ ಮಠದಲ್ಲಿ 68 ದೀಕ್ಷಾ ವಟುಗಳಿಗೆ ಲಿಂಗ ಧಾರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಲಿಂಗ, ವಿಭೂತಿ, ರುದ್ರಾಕ್ಷಿ ಧಾರಣೆ, ಇಷ್ಟಲಿಂಗ ಪೂಜೆ ಮೂಲಕ ಸಮಾಜದಲ್ಲಿ ಅರಿವು ಮೂಡಿಸುವ ಕೆಲಸವನ್ನು ಮಹಾ ವೇದಿಕೆ ಮಾಡುತ್ತಿದೆ. ಏ.26ರಂದು ನಡೆಯುವ ವಿಶ್ವಗುರು ಬಸವೇಶ್ವರರ 896ನೇ ಜಯಂತಿ, ತ್ರಿವಿಧ ದಾಸೋಹಿ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಅವರ 119ನೇ ಜಯಂತಿ ಹಾಗು ಶ್ರೀ ಶಿವಲಿಂಗ ಸ್ವಾಮೀಜಿ ಅವರ 92ನೇ ಜಯಂತ್ಯೋತ್ಸವ, ನಿರಂಜನ ನಿರಾಭಾರಿ ಜಂಗಮ ಪಟ್ಟಾಧಿಕಾರದ 56ನೇ ಮಾಸ ಕಾರ್ಯಕ್ರಮ, ಶ್ರೀ ಶಿವಲಿಂಗ ಸ್ವಾಮೀಜಿ ದಾಸೋಹ ಭವನ ಉದ್ಘಾಟನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ವಿಶ್ವ ವೀರಶೈವ ಲಿಂಗಾಯತ ಮಹಾ ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ರಾಜಾಪುರ ಮಠದ ನಟರಾಜ್, ರಾಜ್ಯಾಧ್ಯಕ್ಷ ಎಂ.ಎನ್.ಕುಮಾರಸ್ವಾಮಿ ಅವರು ಕಳೆದ 15 ವರ್ಷಗಳಿಂದ 27 ಸಾವಿರ ದೀಕ್ಷಾ ವಟುಗಳಿಗೆ ಇಷ್ಟಲಿಂಗ ಪೂಜೆ, ಲಿಂಗ ಧಾರಣೆ ಮತ್ತು ಧಾರ್ಮಿಕ ಕಾರ್ಯ ಮಾಡಿಕೊಂಡು ಬಂದಿದ್ದಾರೆ. ತಮಿಳುನಾಡು, ಕೇರಳ ಹಾಗು ಹೊರ ರಾಜ್ಯಗಳಲ್ಲಿ ಜನ ಜಾಗೃತಿ, ಲಿಂಗಧಾರಣೆ ಮಾಡಿಕೊಂಡು ಬರುತ್ತಿರುವುದು ಶ್ಲಾಘನೀಯವೆಂದರು.

ಶ್ರೀ ವಿಜಯಕುಮಾರ ಸ್ವಾಮೀಜಿ ಮಾತನಾಡಿ, ಲಿಂಗಪೂಜೆ ಶ್ರೇಷ್ಟವಾದುದು. ಗುರುಗಳಿಂದ ಲಿಂಗ ಧಾರಣೆ ಮಾಡಿಸಿಕೊಳ್ಳಬೇಕು. ಲಿಂಗ ಪೂಜೆ ಮಾಡಿದರೆ ಎಲ್ಲಾ ದೇವರನ್ನು ಪೂಜಿಸಿದಂತಾಗುತ್ತದೆಂದರು.

ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಬಿ.ಪಿ.ಐಸ್ವಾಮಿಗೌಡ, ಕೆ.ಬಿ.ಜಗದೀಶ್, ಡಿಂಪಲ್ ಕುಮಾರ್, ಮಠದ ಅಭಿವೃದ್ಧಿ ಸಮಿತಿ ಕಾರ್ಯದರ್ಶಿ ಬಿ.ಎಸ್.ಕಾಂತರಾಜು, ಬಿ.ಪಿ.ಸೋಮಣ್ಣ, ಎನ್.ಕೆ.ಮಲ್ಲಿಕಾರ್ಜುನ, ಸಕಲೇಶಪುರ ಶ್ರೀ ಸಿದ್ಧಗಂಗಾ ಟ್ರಸ್ಟ್ ಕಾರ್ಯದರ್ಶಿ, ಬಿ.ಎಸ್.ವಿದ್ಯಾಶಂಕರ್, ಉದ್ಯಮಿ ರಾಜಶೇಖರ್, ವಿಶ್ವ ವೀರಶೈವ ಮಹಾ ವೇದಿಕೆ ರಾಜ್ಯಾಧ್ಯಕ್ಷ ಎಂ.ಎನ್.ಕುಮಾರಸ್ವಾಮಿ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿ ಕಟ್ಟಾಯ ಶಿವಕುಮಾರ್ ಮುಂತಾದವರು ಇದ್ದರು.

ಎಂಸಿಇ ಕಾಲೇಜಿನಲ್ಲಿ 2K26 ಲೋಗೋ ಅನಾವರಣ

• ಪ್ರಜೋದಯ ವರದಿ

ಹಾಸನ: ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶನಿವಾರ ದಿ ಲಿಟರರಿ ಕ್ಲಬ್ ವತಿಯಿಂದ 2K26 ಲೋಗೋ ಅನಾವರಣ ಮಾಡಲಾಯಿತು.

ಲೀಟರರಿ ಕ್ಲಬ್ ವತಿಯಿಂದ ಮೇ 8 ರಿಂದ 10ರ ವರೆಗೆ ಮೂರು ದಿನ 35 ರೋಚಕ ಉಪ ಕಾರ್ಯಕ್ರಮ ಆಯೋಜಿಸಲಾಗಿದೆ.

ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಚೌಡುವಳ್ಳಿ ಜಗದೀಶ್, ಪ್ರಾಂಶುಪಾಲ ಡಾ.ಹೆಚ್.ಜೆ.ಅಮರೇಂದ್ರ, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ. ಇಂದ್ರ ಬಹುದ್ದೂರ್, ಸಹ ಅಧಿಕಾರಿ ಡಾ.ಶಿವಶಂಕರ್, ಕಾರ್ಯಕ್ರಮ ಸಂಯೋಜಕ ಡಾ. ಶರತ್, ಸಹಪ್ರಾಧ್ಯಾಪಕ ಕೆ.ಎಸ್. ಪ್ರಸನ್ನಕುಮಾರ್, ಕಟ್ಟಾಯ ಶಿವಕುಮಾರ್, ರಘುಪ್ರಸಾದ್ ಮತ್ತಿತರರಿದ್ದರು.

ಸಾಧನೆ ಮಾಡಿದವರಿಗೆ ಸರ್ಕಾರಿ ಉದ್ಯೋಗಾವಕಾಶ: ಸತೀಶ್ ಕುಮಾರ್

ಪವರ್ ಲಿಫ್ಟಿಂಗ್ ವಿಶ್ವದಲ್ಲಿ ಮಾನ್ಯತೆ ಪಡೆದ ಕ್ರೀಡೆ

• ಪ್ರಜೋದಯ ವರದಿ

ಹಾಸನ: ಪವರ್ ಲಿಫ್ಟಿಂಗ್ ವಿಶ್ವದ 156 ದೇಶಗಳಲ್ಲಿ ಮಾನ್ಯತೆ ಪಡೆದ ಕ್ರೀಡೆಯಾಗಿದೆ. ಈಗ ಎಲ್ಲಾ ಜಿಮ್ನ್ಯಾಷಿಯಂ ಹಾಗು ಸಾಮಾನ್ಯ ಜಿಮ್‌ಗಳಲ್ಲಿಯೂ ಪವರ್ ಲಿಫ್ಟಿಂಗ್ ಅಭ್ಯಾಸ ಮಾಡುವ ಕ್ರೀಡಾಪಟುಗಳಿದ್ದಾರೆಂದು ಪವರ್ ಲಿಫ್ಟಿಂಗ್ ಸಂಸ್ಥೆಯ ರಾಷ್ಟ್ರೀಯ ಅಧ್ಯಕ್ಷ ಸತೀಶ್ ಕುಮಾರ್ ಅವರು ಹೇಳಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿರುವ 2 ದಿನಗಳ ರಾಜ್ಯ ಮಟ್ಟದ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದ ಅವರು, ಪವರ್ ಲಿಫ್ಟಿಂಗ್‌ನಲ್ಲಿ ಕರ್ನಾಟಕದ ಕ್ರೀಡಾಪಟುಗಳು ಪ್ರತಿ ಬಾರಿಯೂ ರಾಷ್ಟ್ರೀಯ ಮಟ್ಟದಲ್ಲಿ ಪದಕ ಗೆದ್ದು ರಾಜ್ಯದ ಕೀರ್ತಿ ಹೆಚ್ಚಿಸುತ್ತಿದ್ದಾರೆಂದು ಹೇಳಿದರು.

ಈ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ ಅನೇಕರು ರಾಷ್ಟ್ರೀಯ ಹಾಗು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ. ಈ ಸಾಧನೆ ಮಾಡಿದವರಿಗೆ ಉದ್ಯೋಗಾವಕಾಶ ಖಂಡಿತ ವಾಗಿ ಸಿಗುತ್ತವೆ. ರಾಜ್ಯ ಸರ್ಕಾರದಿಂದ ಕ್ರೀಡಾಪಟುಗಳಿಗೆ ಶಿಕ್ಷಣ ಹಾಗು ಉದ್ಯೋಗದಲ್ಲಿ ಶೇ.2ರಷ್ಟು ಮೀಸಲಾತಿ ಸೌಲಭ್ಯ ಇರುವುದರಿಂದ ಉತ್ತಮ ಭವಿಷ್ಯವಿದೆ. ಸರಿಯಾದ ತರಬೇತಿ, ಶಿಸ್ತು ಮತ್ತು ಪ್ರೋತ್ಸಾಹ ದೊರೆತರೆ ಜಿಲ್ಲೆಯ ಕ್ರೀಡಾಪಟುಗಳು ರಾಜ್ಯ, ರಾಷ್ಟ್ರೀಯ ಹಾಗು ಅಂತಾರಾಷ್ಟ್ರೀಯ ಮಟ್ಟದಲ್ಲಿ ಇನ್ನಷ್ಟು ಸಾಧನೆ ಮಾಡಬಹುದು. ಯುವಕರು ಹೆಚ್ಚು ಸಂಖ್ಯೆಯಲ್ಲಿ ಈ ಕ್ರೀಡೆಗೆ ಬರಬೇಕೆಂದರು.

ಜಿಲ್ಲಾ ಪವರ್ ಲಿಫ್ಟಿಂಗ್ ಸಂಸ್ಥೆ ವತಿಯಿಂದ ಇದೇ ಮೊದಲ ಬಾರಿಗೆ ನಗರದಲ್ಲಿ ರಾಜ್ಯಮಟ್ಟದ ಮುಕ್ತ ಹಾಗು ಬಾಲಕ-ಬಾಲಕಿಯರ ಸಬ್ ಜೂನಿಯರ್ ಕ್ಲಾಸಿಕ್ ಮತ್ತು ಎಕ್ಯುಪ್ಡ್ ಪವರ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್ ನ್ನು ಅತ್ಯುತ್ತಮವಾಗಿ ಆಯೋಜಿಸಲಾಗಿದೆ. ಜಿಲ್ಲಾ ಪವರ್ ಲಿಫ್ಟಿಂಗ್ ಸಂಸ್ಥೆಯ ಸಂಸ್ಥಾಪಕ ಹಾಗು ಕಾರ್ಯದರ್ಶಿ ಕೆ.ಹನುಮಂತೇಗೌಡ ಮತ್ತು ಎಲ್ಲಾ ಪದಾಧಿಕಾರಿಗಳ ಶ್ರಮದಿಂದ ಈ ಮಟ್ಟದ ಸ್ಪರ್ಧೆ ಹಾಸನದಲ್ಲಿ ಸಾಧ್ಯವಾಗಿದೆ ಎಂದರು.

2 ದಿನಗಳ ಕಾಲ ನಿರಂತರವಾಗಿ ನಡೆಯಲಿರುವ ಈ ಚಾಂಪಿಯನ್‌ಶಿಪ್‌ನಲ್ಲಿ ಮೊದಲ ದಿನ ಕ್ಲಾಸಿಕ್ ವಿಭಾಗದ ಎಲ್ಲಾ ಸ್ಪರ್ಧೆಗಳು ನಡೆಯಲಿದ್ದು, ಭಾನುವಾರ ಎಕ್ಯುಪ್ಡ್ ಪವರ್ ಲಿಫ್ಟಿಂಗ್ ಸ್ಪರ್ಧೆ ನಡೆಯಲಿವೆ ಎಂದು ತಿಳಿಸಿದರು.

ಜಿಲ್ಲಾ ಪವರ್ ಲಿಫ್ಟಿಂಗ್ ಸಂಸ್ಥೆ ಗೌರವಾಧ್ಯಕ್ಷ ಕೆ.ಎಂ.ಶ್ರೀನಿವಾಸ್ ಅವರು ಮಾತನಾಡಿ, ಯಾವುದೇ ಕ್ರೀಡೆಯಲ್ಲಿ ಗೆಲುವು ಮತ್ತು ಸೋಲು ಎರಡನ್ನೂ ಸಮಾನವಾಗಿ ಸ್ವೀಕರಿಸುವ ಮನೋಭಾವ ಇರಬೇಕು. ಹಾಸನದಲ್ಲಿಯೂ ಪ್ರತಿಭಾವಂತ ಕ್ರೀಡಾಪಟುಗಳಿದ್ದಾರೆ ಎಂಬು ದನ್ನು ಈ ಸ್ಪರ್ಧೆ ಸಾಬೀತುಪಡಿಸಿದೆ. ಈಗ ಜೂನಿಯರ್ ವಿಭಾಗದಲ್ಲಿ ಭಾಗವಹಿಸುತ್ತಿರುವವರು ಮುಂದೆ ಸೀನಿಯರ್ ವಿಭಾಗ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸ್ಪರ್ಧಿಸುವ ಮಟ್ಟಕ್ಕೆ ಬೆಳೆಯ ಬೇಕೆಂದರು.

ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ಕ್ರೀಡಾ ಪಟುಗಳು ಉತ್ಸಾಹದಿಂದ ಪಾಲ್ಗೊಂಡು ಅತ್ಯುತ್ತಮ ಪ್ರದರ್ಶನ ನೀಡಿದರು. ಕಾರ್ಯಕ್ರಮಕ್ಕೂ ಮೊದಲು ಪೂಜೆ ಸಲ್ಲಿಸಲಾಯಿತು. ಪವರ್ ಲಿಫ್ಟಿಂಗ್‌ಗೆ ಅಗತ್ಯವಿರುವ ಪರಿಕರಗಳನ್ನು ಟೇಪ್ ಕತ್ತರಿಸುವ ಮೂಲಕ ಉದ್ಘಾಟಿಸಲಾಯಿತು.

ಜಿಲ್ಲಾ ಪವರ್ ಲಿಫ್ಟಿಂಗ್ ಸಂಸ್ಥೆಯ ಪೋಷಕ ನಿರಂಜನ್ ರಾಜ್, ಸಂಸ್ಥೆ ಸಂಸ್ಥಾಪಕ ಕೆ. ಹನುಮಂತೇಗೌಡ, ಸಹ ಕಾರ್ಯದರ್ಶಿ ಸಂತೋಷ್‌ಶೆಟ್ಟಿ, ಉಪಾಧ್ಯಕ್ಷರಾದವೇಣು ಗೋಪಾಲ್, ಮಂಜುನಾಥ್, ತ್ರಿಭುವನ್, ಶಶಿಧರ್, ಸಿ.ಕೆ.ರಘು, ಶಿವಮೊಗ್ಗಾ ಜಿಲ್ಲಾ ಪವರ್ ಲಿಫ್ಟಿಂಗ್ ಸಂಸ್ಥೆಯ ಅಧ್ಯಕ್ಷ ಕಾರಂತ್, ಮಂಗಳೂರು ಘಟಕದ ಅಧ್ಯಕ್ಷ ಮಧುಚಂದ್ರ, ತೀರ್ಪುಗಾರರಾದ ಜಯರಾಂ, ಶಿವಣ್ಣ ಇದ್ದರು.

ಭಯದಿಂದಲ್ಲ, ನಿರಾಶೆಯಿಂದ ಪಕ್ಷ ತೊರೆದಿದ್ದೇವೆ

ನವದೆಹಲಿ: ಭಯದಿಂದ ನಾವು ಪಕ್ಷ ತೊರೆದಿದ್ದೇವೆಂಬ ಎಎಪಿಯ ಹೇಳಿಕೆ ತಪ್ಪು. ನಾವು ಯಾವುದೇ ಭಯದಿಂದ ಹೋಗುತ್ತಿಲ್ಲ, ಬದಲಾಗಿ ನಿರಾಶೆ ಮತ್ತು ಅಸಹ್ಯದಿಂದ ಪಕ್ಷ ತೊರೆದಿದ್ದೇವೆಂದು ರಾಜ್ಯಸಭಾ ಸದಸ್ಯ ರಾಘವ್ ಚಡ್ಡಾ ಅವರು ಶನಿವಾರ ಹೇಳಿದ್ದಾರೆ.

ಎಎಪಿಯ ಆರು ಇತರ ಸಂಸದರೊಂದಿಗೆ ಬಿಜೆಪಿಗೆ ಸೇರಿದ ಮರು ದಿನವೇ ಚಡ್ಡಾ ಈ ಹೇಳಿಕೆ ನೀಡಿದ್ದಾರೆ. ಇದೇ ವೇಳೆ ಶೀಶ್ ಮಹಲ್ ವಿವಾದವನ್ನು ಪ್ರಸ್ತಾಪಿಸಿದ ಚಡ್ಡಾ, 2025ರ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಎಎಪಿ ಸೋಲಿಗೆ ಇದು ಪ್ರಮುಖ ಕಾರಣಗಳಲ್ಲಿ ಒಂದಾಗಿದೆ ಎಂದು ಪ್ರತಿಪಾದಿಸಿದ್ದಾರೆ.

ಪ್ರತಿಯೊಬ್ಬ ಪ್ರಾಮಾಣಿಕ ವ್ಯಕ್ತಿಗೆ ಈಗ ಎಎಪಿಯಲ್ಲಿ ಕೆಲಸ ಮಾಡಲು ಜಾಗವೇ ಉಳಿದಿಲ್ಲ ಎಂಬ ಭಾವನೆ ಮೂಡಿದೆ. ಪಕ್ಷವು ತಪ್ಪು ಹಾದಿಯಲ್ಲಿ ಸಾಗುತ್ತಿದ್ದು, ಅದರೊಂದಿಗೆ ಗುರುತಿಸಿಕೊಳ್ಳಲು ಯಾರೂ ಬಯಸುತ್ತಿಲ್ಲ. ಈ ಕಾರಣದಿಂದಲೇ ನಾಯಕರು ಒಬ್ಬರ ನಂತರ ಒಬ್ಬರಂತೆ ಪಕ್ಷವನ್ನು ತೊರೆಯುತ್ತಿದ್ದಾರೆ ಎಂದು ಹೇಳಿದ್ದಾರೆ.

ನಗರದ ಐಟಿಐ ಕಾಲೇಜಿಗೆ 60ರ ಸಂಭ್ರಮ

ಮೇ 2,3 ರಂದು ಗುರುವಂದನಾ, ವಿದ್ಯಾರ್ಥಿಗಳ ಸಮ್ಮಿಲನ

• ಪ್ರಜೋದಯ ವರದಿ

ಹಾಸನ: ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ)ಯ 60 ವರ್ಷದ ಸಂಭ್ರಮಾಚರಣೆ, ಗುರು ವಂದನಾ ಹಾಗು ವಿದ್ಯಾರ್ಥಿಗಳ ಸಮ್ಮಿಲನ ಕಾರ್ಯಕ್ರಮವನ್ನು ಮೇ. 2,3 ರಂದು ಹಮ್ಮಿಕೊಳ್ಳಲಾಗಿದೆಂದು ಐಟಿಐ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಕೆ.ಎಂ.ಶ್ರೀನಿವಾಸ್ ಅವರು ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 3ರಂದು ನಡೆಯುವ ಮುಖ್ಯ ಸಮಾರಂಭದಲ್ಲಿ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಆಯುಕ್ತರಾದ ಶಿಲ್ಪ ಅವರು ಗೌರವ ಉಪಸ್ಥಿತಿ ವಹಿಸಲಿದ್ದು, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಕಾರ್ಯಕ್ರಮ ಉದ್ಘಾಟಿ ಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ನಿರ್ದೇಶಕ ಎನ್.ಎಸ್. ಚಿದಾನಂದ, ಜಂಟಿ ನಿರ್ದೇಶಕ ಬಿ.ಎಲ್.ಚಂದ್ರಶೇಖರ, ಹೆಚ್.ಪಿ. ಮಂಜುನಾಥ, ಎಸ್.ಮಂಜುಳ, ಉಪನಿರ್ದೇಶಕರಾದ ಕೆ.ಸಿ.ರವಿಶಂಕರ್ ಸೇರಿ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ಮೇ 2ರಂದು ಗುರುವಂದನಾ ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕರಿಗೆ ಸನ್ಮಾನ, ಹಳೆ ವಿದ್ಯಾರ್ಥಿಗಳ ನೆನಪು ಹಂಚಿಕೆ, ವಿದ್ಯಾರ್ಥಿಗಳ ಸಮ್ಮಿಲನ, ಸಂಸ್ಥೆಯ ಬೆಳವಣಿಗೆ ಕುರಿತು ವಿಶೇಷ ಚರ್ಚೆಗಳು ನಡೆಯಲಿವೆ. ಹಲವು ವರ್ಷಗಳ ಬಳಿಕ ಹಳೆಯ ವಿದ್ಯಾರ್ಥಿಗಳು ಒಂದೇ ವೇದಿಕೆಯಲ್ಲಿ ಸೇರುವ ಈ ಕಾರ್ಯಕ್ರಮಕ್ಕೆ ವಿಶೇಷ ಮಹತ್ವ ನೀಡಲಾಗಿದೆ. ಮೇ 3ರಂದು ಬೆಳಿಗ್ಗೆ 10 ಗಂಟೆಗೆ ಖ್ಯಾತ ಹಾಸ್ಯ ಕಲಾವಿದ ಮಿಮಿಕ್ರಿ ಗೋಪಿ ಅವರಿಂದ ವಿಶೇಷ ಮನರಂಜನಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಕ್ಷೀಣಿಸುತ್ತಿರುವ ಐಟಿಐ ಉಳಿಸಿ ಬೆಳೆಸಬೇಕು. ಪ್ರವೇಶಾತಿ ಹೆಚ್ಚಿಸಬೇಕು. ಹಿಂದೆ ಇಲ್ಲಿ ಓದಿದ ವಿದ್ಯಾರ್ಥಿಗಳು ಇಂದು ಅನೇಕ ಪ್ರತಿಷ್ಠಿತ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅದರ ಅನುಕೂಲವನ್ನು ಎಲ್ಲೆಡೆ ಪ್ರಚಾರ ಪಡಿಸಬೇಕು. ಸಂಸ್ಥೆ ನಡೆದುಬಂದ ಹಾದಿ ಹಾಗು ಪ್ರಯೋಜ ನವನ್ನು ಎಲ್ಲರಿಗೂ ತಿಳಿಸಬೇಕು ಎಂದರು.

ಪ್ರಾಂಶುಪಾಲ ತೌಫಿಕ್ ಅಹಮದ್, ಖಜಾಂಚಿ ಎ.ಎನ್.ಪರಮೇಶ್, ನಿರ್ದೇಶಕರಾದ ಸುರೇಶ್, ರಾಮಕೃಷ್ಣ ಇದ್ದರು.

ಸಾಂಸ್ಕೃತಿಕ ವೈಭವದೊಂದಿಗೆ ಬುದ್ಧ ಪೂರ್ಣಿಮೆ

ಪೂರ್ವಭಾವಿ ಸಭೆಯಲ್ಲಿ ನಿರ್ಧಾರ

• ಪ್ರಜೋದಯ ವರದಿ

ಹಾಸನ: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗು ಜಿಲ್ಲೆಯ ಬುದ್ಧವಿಹಾರಗಳು ಮತ್ತು ಬೌದ್ಧ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ 2570ನೇ ಪವಿತ್ರ ವೈಶಾಖ ಬುದ್ಧ ಪೂರ್ಣಿಮೆ (ಬುದ್ಧ ಜಯಂತಿ) ಕಾರ್ಯಕ್ರಮವನ್ನು ಸಾಂಸ್ಕೃತಿಕ ವೈಭವದೊಂದಿಗೆ ಆಚರಿಸಲು ನಿರ್ಧರಿಸಲಾಯಿತು.

ನಗರದ ಪ್ರವಾಸಿ ಮಂದಿರದಲ್ಲಿ ಬುದ್ಧ ಪೂರ್ಣಿಮೆ ಆಚರಣೆಯ ಸಿದ್ಧತೆ ಕುರಿತು ಶನಿವಾರ ಮುಖಂಡರೊಂದಿಗೆ ನಡೆದ ಪೂರ್ವಭಾವಿ ಸಭೆಯಲ್ಲಿ ಕಾರ್ಯಕ್ರಮಯಶಸ್ವಿಯಾಗಿ ಆಯೋಜಿಸುವ ಬಗ್ಗೆ ಚರ್ಚಿಸಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಲಾಯಿತು.

ಮೇ 1 ಬೆಳಿಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಯಿಂದ ಕಲಾಭವನದವರೆಗೆ ಗೌತಮ ಬುದ್ಧನ ಭಾವಚಿತ್ರವನ್ನು ರಥದೊಂದಿಗೆ ಭವ್ಯ ಮೆರವಣಿಗೆ ನಡೆಸಿ, ನಂತರ ಕಲಾಭವನದಲ್ಲಿ ವೇದಿಕೆ ಕಾರ್ಯಕ್ರಮ ನಡೆಸುವ ಬಗ್ಗೆ ಚರ್ಚಿಸಲಾಯಿತು. ಬುದ್ಧನ ಜೀವನ ತತ್ವಗಳು, ಶಾಂತಿ, ಅಹಿಂಸಾ ಮತ್ತು ಸಮಾನತೆಯ ಸಂದೇಶಗಳ ಕುರಿತು ಉಪನ್ಯಾಸ ಆಯೋಜಿಸುವುದು ಮತ್ತು ಸಾಂಸ್ಕೃತಿಕ ಕಾರ್ಯಕ್ರಮ, ಧಾರ್ಮಿಕ ಆಚರಣೆಗಳನ್ನು ನಡೆಸಲು ಸಭೆಯಲ್ಲಿ ಅಭಿಪ್ರಾಯ ಗಳು ವ್ಯಕ್ತವಾದವು. ಮುಖಂಡರಾದ ಕೃಷ್ಣದಾಸ್, ನಿಂಗಣ್ಣ, ನಾಯಕರಹಳ್ಳಿ ಮಲ್ಲಯ್ಯ, ಬಸವರಾಜ್, ಯೋಗೇಶ್, ಕುಮಾರ್ ಗೌರವ್, ಮಲ್ಲೇಶ್‌ಅಂಬುಗ, ಕೆ.ವೈ.ಜಗದೀಶ್, ನಿಟ್ಟೂರು ತೋಟೇಶ್, ರಾಮು ನರಸಿನಕುಪ್ಪೆ, ಶಿವಮ್ಮ ಇದ್ದರು.

ಗಾಳಿಕೆರೆ ಭೂತಪ್ಪ ಸ್ವಾಮಿ ಜಾತ್ರಾ ಮಹೋತ್ಸವ

• ಪ್ರಜೋದಯ ವರದಿ

ಅರೇಹಳ್ಳಿ: ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿ ಮಲ್ಲಾಪುರ ಗ್ರಾಮದಲ್ಲಿ ಫಲಹಾರ ಸ್ವಾಮಿ ಸಿದ್ದರ ಆಶೀರ್ವಾದದೊಂದಿಗೆ ಶ್ರೀ ಗಾಳಿಕೆರೆ ಭೂತಪ್ಪ ಸ್ವಾಮಿಯ 19ನೇ ವರ್ಷದ ಜಾತ್ರಾ ಮಹೋತ್ಸವ ಹಾಗು ಬೆಳ್ಳಿ ರಥೋತ್ಸವ ಜರುಗಿತು.

ಪ್ರಧಾನ ಅರ್ಚಕ ಹಾಲಪ್ಪಸ್ವಾಮಿ ಅವರ ನೇತೃತ್ವದಲ್ಲಿ ವೈಶಾಕ ಮಾಸದ ಶುಕ್ಲ ಪಕ್ಷ ಶುದ್ಧ ಬಹುಳದ ಪೌರ್ಣಮಿ ಶುಭ ದಿನದಂದು ಗಂಗಾಪೂಜೆ, ಗಣಪತಿ ಪೂಜೆ, ಉತ್ಸವ ಮೂರ್ತಿಗೆ ಪಂಚಾಮೃತ ಅಭಿಷೇಕ ನಂತರ ಬೆಳ್ತಂಗಡಿಯ ಸೃಷ್ಟಿ ಗೊಂಬೆ ಬಳಗದ ವತಿಯಿಂದ ಗೊಂಬೆ ಮೇಳ ಹಾಗು ನೃತ್ಯದೊಂದಿಗೆ ಮೆರವಣಿಗೆ ನಡೆಯಿತು.

ಗಾಳಿಕೆರೆ ಭೂತಪ್ಪ ಸ್ವಾಮಿಗೆ ಮಹಾರುದ್ರಾಭಿಷೇಕ, ಸರಪಳಿ ಕೆಂಚರಾಯ ಸ್ವಾಮಿಗೆ ಪಂಚಾಮೃತ ಅಭಿಷೇಕ, ಹೂವಿನ ಅಲಂಕಾರ ಹಾಗು ಅಷ್ಟೋತ್ತರ ಪೂಜಾ ಮಹೋತ್ಸವ ಜರುಗಿದವು. ಪೂಜೋತ್ಸವದ ಎರಡನೇ ದಿನ ಲೋಕದಮ್ಮನವರಿಗೆ ವಿಶೇಷ ಪೂಜೆ ಹಾಗು ಕುಂಭ ಒಡೆಯುವ ಕಾರ್ಯಕ್ರಮ ನೆರವೇರಿತು. ಬಕ್ಕರವಳ್ಳಿಯ ಪುರೋಹಿತ ಮಹೇಶ್ ಶಾಸ್ತ್ರಿ, ಮಲ್ಲಾಪುರದ ನಾಗರಾಜು ಪೂಜಾ ವಿಧಿವಿಧಾನ ನಡೆಸಿಕೊಟ್ಟರು.

ಬಸ್ ನಿಲ್ದಾಣದಲ್ಲಿದ್ದ ನಿರಾಶ್ರಿತ ವೃದ್ಧನಿಗೆ ಆಶ್ರಯ

ಪ್ರಜೋದಯ ವರದಿ ಪರಿಣಾಮ

• ಪ್ರಜೋದಯ ವರದಿ

ಅರೇಹಳ್ಳಿ: ಸಾರ್ವಜನಿಕರ ಅನುಕೂಲಕ್ಕಾಗಿ ಪಟ್ಟಣದ ಚರ್ಚ್ ಬಳಿ ನಿರ್ಮಿಸಲಾದ ಬಸ್ ನಿಲ್ದಾಣದಲ್ಲಿ ಕಳೆದ ಕೆಲವು ದಿನಗಳಿಂದ ನಿರಾಶ್ರಿತ ವೃದ್ಧನ ಆಶ್ರಯ ತಾಣವಾಗಿತ್ತು. ಈ ಬಗ್ಗೆ ಪತ್ರಿಕೆಯಲ್ಲಿ ವರದಿ ಪ್ರಕಟಿಸಿದ ಬೆನ್ನಲ್ಲೇ ವೃದ್ಧನಿಗೆ ಸೂಕ್ತ ಆಶ್ರಯ ವ್ಯವಸ್ಥೆ ಕಲ್ಪಿಸುವ ಜೊತೆಗೆ ಪ್ರಯಾಣಿಕರಿಗೂ ಅನುಕೂಲ ಮಾಡಿಕೊಡಲಾಗಿದೆ.

ಬಸ್ ನಿಲ್ದಾಣದಲ್ಲಿ ಆಶ್ರಯ ಪಡೆದುಕೊಂಡಿದ್ದ ವೃದ್ಧ, ಬೀದಿ ಬದಿಗಳಲ್ಲಿ ಸಂಗ್ರಹಿಸಿದ ಗುಜರಿ, ಚಿಂದಿ ಹಾಗು ಇತರೆ ತ್ಯಾಜ್ಯ ವಸ್ತುಗಳನ್ನು ತಂಗುದಾಣದಲ್ಲಿ ಇಟ್ಟುಕೊಂಡು ಅಶುಚಿತ್ವ ಉಂಟುಮಾಡಿದ್ದರಿಂದ ಸ್ಥಳೀಯರು ಹಾಗು ಪ್ರಯಾಣಿಕರು ಬಸ್ ನಿಲ್ದಾಣಕ್ಕೆ ಹೋಗಲು ಮುಜುಗರ ಪಟ್ಟುಕೊಳ್ಳುತ್ತಿದ್ದರು.

ಈ ಹಿನ್ನಲೆ ವೃದ್ಧನಿಗೆ ಸರ್ಕಾರದಿಂದ ಪುನರ್ವಸತಿ ಕಲ್ಪಿಸಿ, ತಂಗುದಾಣದಲ್ಲಿ ಸ್ವಚ್ಛತೆ ಕಾಪಾಡುವಂತೆ ಸಾರ್ವಜನಿಕರು ಮನವಿ ಮಾಡಿದ್ದರು. ಈ ಬಗ್ಗೆ ಏ.11ರಂದು ಸಾರ್ವಜನಿಕ ತಂಗುದಾಣವೇ ವೃದ್ಧನಿಗೆ ಆಶ್ರಯ ತಾಣ ಎಂಬ ಶೀರ್ಷಿಕೆಯಲ್ಲಿ ಪ್ರಜೋದಯ ದಿನಪತ್ರಿಕೆ ಯಲ್ಲಿ ವರದಿ ಪ್ರಕಟವಾಗಿತ್ತು. ಈ ವರದಿ ವ್ಯಾಪಕವಾಗಿ ಹರಡುತ್ತಿದ್ದಂತೆ ಜಿಲ್ಲಾಧಿಕಾರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರು.

ಅದರಂತೆ ಕಳೆದ ನಾಲ್ಕೈದು ದಿನಗಳಿಂದ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರದ ಅಧಿಕಾರಿಗಳು ವೃದ್ಧನಿಗಾಗಿ ಹುಡುಕಾಟ ನಡೆಸಿದ್ದರು. ಕೆಲವು ದಿನಗಳಿಂದ ಕಾಣೆಯಾಗಿದ್ದ ವೃದ್ಧನು ಶನಿವಾರ ಪಟ್ಟಣದ ಹೊರವಲಯದಲ್ಲಿರುವ ಘನ ತ್ಯಾಜ್ಯ ವಿಲೇವಾರಿ ಘಟಕದ ಬಳಿ ಪತ್ತೆಯಾಗಿದ್ದಾನೆ. ಈ ಬಗ್ಗೆ ಸ್ಥಳೀಯ ನಿವಾಸಿ ಶೇಖ್ ಅಬ್ದುಲ್ಲಾ ಮಾಹಿತಿ ನೀಡಿದ ಹಿನ್ನಲೆ ಅಧಿಕಾರಿಗಳು ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ವೃದ್ಧನನ್ನು ವಶಕ್ಕೆ ಪಡೆದುಕೊಂಡರು.

ವಿಚಾರಣೆ ವೇಳೆ ಆತ ನಿರಾಶ್ರಿತನೆಂದು ತಿಳಿದುಬಂದಿದ್ದರಿಂದ, ಜಿಲ್ಲಾ ವಿಕಲಚೇತನರ ಹಾಗು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ವೇತಾ ವೃದ್ಧಾಶ್ರಮಕ್ಕೆ ದಾಖಲಿಸಲಾಗಿದೆ.

ಈ ಸಂದರ್ಭದಲ್ಲಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರದ ಮುಖ್ಯಸ್ಥ ಶಿವರಾಜ್ ಗೌಡ, ಶೇಖ್ ಅಬ್ದುಲ್ಲಾ, ವಿಜಯ್ ಅರೇಹಳ್ಳಿ, ಸಂದೀಪ್ ಸೇರಿ ಇತರರು ಹಾಜರಿದ್ದರು.

ಮೂರು ದಿನ ತಾಳಗುಪ್ಪ ಎಕ್ಸ್‌ಪ್ರೆಸ್ ರೈಲು ರದ್ದು

• ಪ್ರಜೋದಯ ವರದಿ

ಹಾಸನ: ಹಾಸನ ಯಾರ್ಡ್‌ನಲ್ಲಿ ಸುರಕ್ಷತೆ ಸಂಬಂಧಿಸಿದ ಕಾಮಗಾರಿಗಳನ್ನು ಕೈಗೊಳ್ಳುತ್ತಿರುವ ಹಿನ್ನಲೆ ಕೆಲ ರೈಲುಗಳ ಸೇವೆಯಲ್ಲಿ ವ್ಯತ್ಯಯವಾಗಲಿದೆ. ಪ್ರಮುಖವಾಗಿ ಮೈಸೂರು ತಾಳಗುಪ್ಪ ಎಕ್ಸ್‌ಪ್ರೆಸ್ ರೈಲು ಮೂರು ದಿನ ರದ್ದಾಗಲಿದೆ.

ಮೈಸೂರು ತಾಳಗುಪ್ಪ ಮೈಸೂರು ಎಕ್ಸ್‌ಪ್ರೆಸ್ (16206-16205) ಮತ್ತು ಅರಸೀಕೆರೆ ಮೆಸೂರು ಪ್ಯಾಸೆಂಜರ್ (56267) ರೆಲುಗಳ ಪ್ರಯಾಣವನ್ನು ಏ.29, ಮೇ 4 ಮತ್ತು ಮೇ 6 ರಂದು ರದ್ದುಗೊಳಿಸಲಾಗಿದೆ.

ಮೈಸೂರು ಶಿವಮೊಗ್ಗಾ ಟೌನ್ ಎಕ್ಸ್‌ಪ್ರೆಸ್(16225) ರೈಲು ಏ.29, ಮೇ 4 ಮತ್ತು ಮೇ 6 ರಂದು ಮೈಸೂರು ಮತ್ತು ಅರಸೀಕೆರೆ ನಡುವೆ ಭಾಗಶಃ ರದ್ದುಗೊಂಡಿದ್ದು, ಅರಸೀಕೆರೆ ನಿಲ್ದಾಣ ದಿಂದ ತನ್ನ ನಿಗದಿತ ಸಮಯಕ್ಕೆ ಪ್ರಯಾಣ ಆರಂಭಿಸಲಿದೆ. ಮೈಸೂರು ಅರಸೀಕೆರೆ ಪ್ಯಾಸೆಂಜರ್ (56266) ರೈಲಿನ ಪ್ರಯಾಣವು ಏ.29, ಮೇ 4 ಮತ್ತು ಮೇ 6ರಂದು ಮಾವಿನಕೆರೆ ಮತ್ತು ಅರಸೀಕೆರೆ ನಡುವೆ ರದ್ದುಗೊಳ್ಳಲಿದ್ದು ಮಾವಿನ ಕೆರೆ ನಿಲ್ದಾಣದಲ್ಲಿ ತನ್ನ ಪ್ರಯಾಣವನ್ನು ಕೊನೆಗೊಳಿಸಲಿದೆ. ಯಶವಂತಪುರ ಕಾರವಾರ ಎಕ್ಸ್‌ಪ್ರೆಸ್(16515) ರೈಲು ಏ.29, ಮೇ 4 ಮತ್ತು ಮೇ 6ರಂದು ಬೆಂಗಳೂರು ವಿಭಾಗದಲ್ಲಿ ಸುಮಾರು 65 ನಿಮಿಷ ವಿಳಂಬವಾಗಿ ಸಂಚರಿಸಲಿದೆ.

ಬೇಸಿಗೆ ರಜೆಯ ಸಂದರ್ಭದಲ್ಲಿ ಪ್ರಯಾಣಿಕರ ದಟ್ಟಣೆಯನ್ನು ಗಮನದಲ್ಲಿಟ್ಟುಕೊಂಡು, ದಕ್ಷಿಣ ಮಧ್ಯ ರೈಲ್ವೆಯು ವಿಶೇಷ ರೈಲುಗಳ ಕಾರ್ಯಾಚರಣೆಯನ್ನು ವಿಸ್ತರಿಸಲು ನಿರ್ಧರಿಸಿದೆ. ರೈಲು ಸಂಖ್ಯೆ 07033 ಕಾಕಿನಾಡ ಟೌನ್ ಮೈಸೂರು ದ್ವಿ-ಸಾಪ್ತಾಹಿಕ ವಿಶೇಷ ರೈಲು, ಮೊದಲು ಏಪ್ರಿಲ್ 20ರವರೆಗೆ ಸಂಚರಿಸಲು ನಿಗದಿಯಾಗಿತ್ತು. ಈಗ ಇದು ಏಪ್ರಿಲ್ 24 ಮತ್ತು 27 ರಂದು ಹೆಚ್ಚುವರಿ ಸಂಚಾರ ನಡೆಸಲಿದೆ. ಅದರ ಜೋಡಿ ಸೇವೆಯಾದ ರೈಲು ಸಂಖ್ಯೆ 07034 ಮೈಸೂರು-ಕಾಕಿನಾಡ ಟೌನ್ ವಿಶೇಷ ರೈಲು, ಈ ಹಿಂದೆ ಏ.21, 2026 ರ ವರೆಗೆ ಸೂಚಿಸಲಾಗಿತ್ತು. ಈಗ ಏ.25 ಮತ್ತು 28, 2026 ರಂದು ಹೆಚ್ಚುವರಿ ಟ್ರಿಪ್‌ಗಳನ್ನು ನಡೆಸಲಿದೆ.

ಸಕಲೇಶಪುರ ತಾಲ್ಲೂಕು ಕುರುಭತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೂಮರಹಳ್ಳಿ ಗ್ರಾಮದ ಪರಿಮಿತಿಯಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಾಣವಾಗಲಿರುವ ರಸ್ತೆ ಕಾಮಗಾರಿಗೆ ಶಾಸಕ ಸಿಮೆಂಟ್ ಮಂಜು ಅವರು ಶನಿವಾರ ಭೂಮಿಪೂಜೆ ನೆರವೇರಿಸಿದರು. ಬಿಜೆಪಿ ಮಂಡಲ ಅಧ್ಯಕ್ಷ ವಳಲಹಳ್ಳಿ ಅಶ್ವಥ್, ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019